ಕೊರವಂಜಿ

★

KORAVANJI
Kannada Monthly

★

ಸಂಪಾದಕರು :

ಶ್ರೀ|| ರಾ. ಶಿ.

★

ಬರಹಗಾರರು :

ಶ್ರೀ|| ಆ. ರಾ. ಸೇ.
ಶ್ರೀ|| ಪ್ರಸಾದ್
ಶ್ರೀಮತಿ ಟಿ. ಸುನಂದಮ್ಮ
ಶ್ರೀಮತಿ ಎಸ್. ಕಮಲಮ್ಮ
ಶ್ರೀ|| ಹಾ. ಮ್ಯೆ. ಸೂರಿ
ಸುನೀತಿ ಕೃಷ್ಣಸ್ವಾಮಿ
ಶ್ರೀ|| ರಾಮಿ
ಶ್ರೀ|| ದಾಶರಥಿ ದೀಕ್ಷಿತ್
ಇತ್ಯಾದಿ, ಇತ್ಯಾದಿ



ನವೆಂಬರ್
೧೯೬೪

೨೫ ಪೈ.

ತಿಳಿನಗೆಯ ಮಾಸಪತ್ರಿಕೆ


For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY.
FAS

ಕೊರವಂಜಿ

ಸಂಪುಟ ೨೩] ನವೆಂಬರ್ ೧೯೬೪ [ಸಂಚಿಕೆ ೮

ಕುಹಕಿಡಿಗಳು

ಬ್ರಿಟನ್ನಿನ ಹೊಸ ಸಚಿವ ಸಂಪುಟದಲ್ಲಿ ೧೦೫ ಜನರಿದ್ದಾರಂತೆ.

—ನಮ್ಮ ಮುಖ್ಯ ಮಂತ್ರಿಗಳಿಗೆ ಈಗ ರೆಕ್ಕೆ ಬಂದ ಹಾಗಾಯ್ತು.

* * * *

ಬಾರತದ ಹಾಕಿ ಟೀಮಿನವರನ್ನು ಒಲವಿನಿಂದ ಕಂಡು ಕೊರವಂಜಿಯು ಕೊಂಕಿ ಮುಗುಳ್ನಗೆ ಮಿಂಚಿಸುತ್ತಾಳೆ.

* * * *

ಕೇರಳ ಚುನಾವಣೆಗಳ ಪ್ರಯುಕ್ತ, ಕಾಂಗ್ರೆಸ್ ಪರವಾಗಿ ಮೊರಾರ್ಜಿಯವರು ಪ್ರಚಾರ ಶುರುಮಾಡುತ್ತಾರಂತೆ.

—ಕಮ್ಯೂನಿಸ್ಟರ ಪರವಾಗಿ ಕೃಶ್ಚೋವ್ ಅವರು ಬಂದು ಪ್ರಸಾರ ಮಾಡಿದರೆ ಜೋಡಿ ಸರಿ ಹೋಗುತ್ತೆ.

* * * *

ಇಂಗ್ಲೆಂಡಿನಲ್ಲಿ ಚುನಾವಣಾ ಹೋರಾಟ—ರಷ್ಯಾದಲ್ಲಿ ಮಾಸ್ಕೋ ಪತನ

—ಚೀಣಾದಲ್ಲಿ ಅಣುಬಾಂಬ್ ಸ್ಫೋಟ! (ಸಮಕಾಲೀನ ಸುದ್ದಿಗಳು)

—ನಾವು ಸ್ಥಿತಪ್ರಜ್ಞರು. ಅದೇ ಕಾಲದಲ್ಲಿ ಹೊಟ್ಟೆಗಿಲ್ಲದೆ ಜಂಬೂಸವಾರಿ ನೋಡಿ ಸಂತಸ ಪಟ್ಟೆವು.

* * * *

ಒಂದು ಲಕ್ಷ ರೂಪಾಯಿ ವರಮಾನ ಬರುವವರು. ವರಮಾನ ತೆರಿಗೆಯನ್ನು ಕೊಡುತ್ತಲೇ ಇಲ್ಲ. ನುಣುಚಿಕೊಂಡಿದ್ದಾರೆ.

(ಟಿ. ಟಿ. ಕೆ. ಬಾಷಣೆ)

—ಸ್ವಾಮಿಾ! ವರಮಾನ ತೆರಿಗೆಯನ್ನು ಸರ್ಕಾರಕ್ಕೆ ಕೊಡದೆ ಇರಬಹುದು ಆದರೆ ಅಷ್ಟೋ ಇಷ್ಟೋ ಶಾಖಾಯ ಲವಣಾಯ ಕೊಡದೆ ಇರ್ತಾರೆಯೇ?

*　　　*　　　*　　　*

ಮೊರಾರ್ಜಿಯವರು ಕೃಶ್ಚೋವ್ ಅವರಿಗೆ ಸಂತಾಪಸೂಚಕ ಸಂದೇಶವನ್ನು ಕಳಿಸಿದ್ದಾರೆ ಎನ್ನುವುದು ಶುದ್ಧ ಸುಳ್ಳಂತೆ.

*　　　*　　　*　　　*

ಕೃಶ್ಚೋವ್ ಅವರ ಅಳಿಯಂದಿರು ಹುದ್ದೆಯ ಆಸೆಗಾಗಿ ಇನ್ನು ಮೇಲೆ ಬ್ರೆಜ್ನೇವ್ ಅವರ ಅಳಿಯಂದಿರಾಗುತ್ತಾರೆ ಎನ್ನುವುದು ಕುಹಕ ಅಷ್ಟೆ.

—ಹಾಗೆ ನಮ್ಮ ದೇಶದಲ್ಲಿ ಆಗಬಹುದು, ಅಲ್ಲಿ ಅಸಾಧ್ಯ.

*　　　*　　　*　　　*

ಇಂಜಿನಿಯರ ಕ್ಯಾಂಪಿನಿಂದ ೯೦೦೦ ರೂ. ಕಳುವಾಯಿತಲ್ಲ ಆ ಹಣ ಈಗ ಸಿಕ್ಕಿದೆಯಂತೆ. ಕದ್ದವನು ಕ್ಯಾಂಪಿನ ಅಡಿಗೆಯವನಂತೆ. ಹೆಸರು ಕುಂಬಕೋಣಂ ಮಹಾಲಿಂಗಂ.　　(ಪತ್ರಿಕೆ)

—ಇಂಜಿನಿಯರದೇ ತಪ್ಪು. ಹೆಸರು ತಿಳಿದೂ ಕೆಲಸಕ್ಕೆ ಇಟ್ಟುಕೊಂಡರಲ್ಲ!

*　　　*　　　*　　　*

ಚೀಣಾದಲ್ಲಿ "ಅಣುಬಾಂಬ್" ಹಾರಿಸಲಾಯಿತಂತೆ.

—ಅಂದಮೇಲೆ, ಲಾಗಾಯ್ತಿನಿಂದ ದೀಪಾವಳಿಗೆ ನಮಗೆ ಕಳಿಸುತ್ತಿದ್ದ ಆಟಂ ಬಾಂಬುಗಳು ಇನ್ನುಮೇಲೆ ಬರುಲ್ಲ ಅಂತಲೇ!

*　　　*　　　*　　　*

ಬಲು ಚೆನ್ನಾಗಿದೆ ಮರಿ, ಈ ಪಲ್ಯ ತಿನ್ನು ಮೈಗೆ ಒಳ್ಳೆಯದು, ಎಂದು ಮಗುವಿಗೆ ತಿನ್ನಿಸಲು ತಂದೆ ಪ್ರಯತ್ನಿಸುತ್ತಾ ತಾನೇ ತಿಂದ ಪ್ರಯುಕ್ತ

—ಈಗ ಹೊಟ್ಟೆನೋವಿಂದ ನರಳುತ್ತಿದ್ದಾನಂತೆ,

*　　　*　　　*　　　*

ನಾಗಾರಾಜ್ಯಕ್ಕೆ ಜಯಪ್ರಕಾಶರು ರೆವೆರೆಂಡ್ ಮೈಕೆಲ್ ಸ್ಕಾಟ್ ಜತೆಗೆ ಹೋದಾಗ.

—ಅಲ್ಲಿದ್ದ ಕೆಲವು ನಾಗರ ಹಾವುಗಳು ಹುತ್ತ ಸೇರಿಕೊಂಡವಂತೆ. ಸರ್ವೋದಯದ ಮುಂದೆ ಸರ್ಪೋದಯವೆ!

*　　　*　　　*　　　*

ಬಾಹ್ಯಾಕಾಶಯಾನ

ಇದು 'ಸಂಧಿಕಾಲ', 'ಸಂಕ್ರಮಣ ಕಾಲ' ಎಂದು ಎಲ್ಲರೂ ಹೇಳುತ್ತಿರುವರಷ್ಟೇ. ಒಂದೂವರೆ ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಸಿಕ್ಕದ ಹಾಗಾಗಿರುವ ಕಾಲ ಬಂತು ಎಂದ ಮೇಲೆ ಬರೀ 'ಸಂಧಿಕಾಲ' ಎಂದು ಹೇಳುವುದಕ್ಕಿಂತ 'ಖಗ್ರಾಸ'ಗ್ರಹಣ ಕಾಲ ಎಂದರೂ ತಪ್ಪಲ್ಲ. ಇಂತಹ ಕಾಲದಲ್ಲಿ ಮಾನವನ ಸಾಧನೆ ತನ್ನ ಶಿಖರವನ್ನು ಮುಟ್ಟಿದೆ ಎಂದು ಶರಾವತಿಯನ್ನು ಕಟ್ಟಿದ ನಾವೇ ಹೇಳಿಕೊಳ್ಳುತ್ತಿರಬೇಕಾದರೆ, ಚಂದ್ರಲೋಕವನ್ನು ತಲುಪುವ ಹವಣಿಕೆಯಲ್ಲಿರುವ ಜನ ಏಕೆ ಹೇಳಿಕೊಳ್ಳುತ್ತಿರ ಬಾರದು ? ಸಮಯಸಾಧಕರು, ಅಗ್ನಿಭಕ್ಷಕರು, ನಟ ವಿಟ ವಿದೂಷಕ ಪೀಠಮರ್ದಕೇತ್ಯಾದಿಗಳು ತಾವು ಏಷ್ಯದ ಆಶಾಜ್ಯೋತಿಗಳು, ನವೋದಿತ ರಾಷ್ಟ್ರಗಳ ನಾಯಕರೆಂದು ಸೊರಹುತ್ತಿರಬೇಕಾದರೆ ಚೆನ್ನಾಗಿ ದಿನಕ್ಕೆ ನಾಲ್ಕು ಹೊತ್ತು ತಿಂದು. ಮೈಮುರಿಯೆ ದುಡಿದು, ಮಿದುಳನ್ನೋಡಿಸಿ ನವಸಂಶೋಧನೆ ಮಾಡುವವರೇಕೆ ತಾವೇ ಮಾನವತೆಯ ಸಾರವೆಂದು ನಂಬಿರಬಾರದು.

ಅವರು ಹಾಗೆ ನಂಬಿದ್ದರು. ಆದರೆ ಇತ್ತೀಚೆಗೆ ಘಟನೆಯೊಂದು ನಡೆದಿದೆ, ಬಹುಶಃ ಕೇಪ್ ಕೆನ್ನೆಡಿಯಲ್ಲಿ ಇದು ನಡೆದಿರಬೇಕು. N. A. S. A. ಸಂಸ್ಥೆಯ ಉನ್ನತಾಧಿಕಾರಿಯೊಬ್ಬರು ಒಂದು ರಾಕೆಟ್ ಟೆಸ್ಟ್ ನಡೆದ ಮೇಲೆ ಹಿಂತಿರುಗುತ್ತಾ, ಅವನನ್ನು ಕಂಡರು. ಅವನು ನಿಲುವಿನಿಂದ ಉನ್ನತ ದೇಹಿ. ಸೊಂಟದ ಸುತ್ತಲೂ ಸುತ್ತಿದ ಬಟ್ಟೆಯೊಂದನ್ನು ಬಿಟ್ಟರೆ ಅವನು ಇನ್ನಾವ ಉಡುಪನ್ನೂ ಧರಿಸಿರಲಿಲ್ಲ, ಗೌರ ವರ್ಣದ ದೇಹ. ಎದೆಯನ್ನು ದಾಟಿ ಕೆಳಗಿಳಿದ ಗಡ್ಡಗಳು. ಕೈಲೊಂದು ಜೀರ್ಣವಾದ ಆಲದ ಎಲೆ. ಹೆಗಲಿನ ಮೇಲೆ ಎಂತಹದೋ ಒಂದು ದಾರ ; ಮುಖದಲ್ಲಿ ತಿರಸ್ಕಾರದ ನಗೆ. ಆ ಅಧಿಕಾರಿ ಹೋಗಿ ಅವನನ್ನು ಮಾತನಾಡಿಸಿದನಂತೆ. ಅದಕ್ಕವನು ಏನೋ ಉತ್ತರ ಕೊಟ್ಟನಂತೆ. ಕೂಡಲೇ ಭದ್ರತಾ ಪೋಲೀಸ್ ಪಡೆಗಳು ಅವನನ್ನು ಬಂಧಿಸಿದವು. ಅವನ ಇತಿಹಾಸವನ್ನು ಪತ್ತೆಹಚ್ಚಲು F. B. I., C. I. L. ಮೊದಲಾದ ಸಮಸ್ತ ಸಂಸ್ಥೆಗಳೂ ಯತ್ನಿಸಿದವು. ಆದರೆ ಅವರ ಪರೀಕ್ಷೆಗೆ ಯಾವ ಫಲಿತಾಂಶವೂ ಸಿಕ್ಕಲಿಲ್ಲ. ಆ ವ್ಯಕ್ತಿಯು ಭಾರತೀಯ ಭಾಷೆಯೊಂದನ್ನು ಮಾತನಾಡುತ್ತಿರುವನೆಂಬ ಒಂದು ಅಂಶ ತಿಳಿದುಬಂತು. ಕೊನೆಗೆ ಅವನನ್ನೇ ಇನ್ನೊಮ್ಮೆ ಕೇಳಿನೋಡಿದರೆ ಉತ್ತಮವೆಂದು ಭಾವಿಸಲಾಯಿತು. ಆ ವ್ಯಕ್ತಿ

"ನಿಮ್ಮೊಡನೆ ಮಾತನಾಡಿ ಏನು ಪ್ರಯೋಜನ" ಎಂದಿತು. ರಾಷ್ಟ್ರೀಯ ಟೆಲಿವಿಷನ್ ಸಂಸ್ಥೆಯೊಂದರ ವ್ಯಾಪಾರೀ ವಿಭಾಗ ಮುಖ್ಯನೊಬ್ಬ ತನ್ನ ಟೆಲಿವಿಷನ್ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದಲ್ಲಿ ಮಿಲಿಯನ್ ಡಾಲರ್ ಕೊಡುವುದಾಗಿ ಹೇಳಿದರೂ ಅವನು ಬಲಿ ಬೀಳಲಿಲ್ಲ. ಈಗಿನ ಮಾನವರು 'ಗಿಡ್ಡ ಪುಟಾಣಿಗಳು' ಎಂದುಕೊಂಡದ್ದು ಕೇಳಿಸಿದುದರಿಂದ ಇವನು ಇತಿಹಾಸ ಪೂರ್ವದ ವ್ಯಕ್ತಿಯೇಕಾಗಿರಬಾರದೆಂದು ಆಂಥ್ರೋಪಾಲಜಿ ಮತ್ತು ಪ್ರಾಚ್ಯ ಶಾಸ್ತ್ರಜ್ಞರನ್ನು ಕರೆಯಿಸಿ ಪರೀಕ್ಷಿಸಿದರು. ಗ್ರ್ಯಾಂಡ್ ಕೆನ್ಯಾನ ತಳದಲ್ಲಿ ಸಿಕ್ಕ ಕಲ್ಲಿಗಿಂತಲೂ ಇವನು ಕೊನೆಯ ಪಕ್ಷ ಒಂದು ಮಿಲಿಯನ್ ವರ್ಷ ಹಿಂದಿನವನಿರಬೇಕೆಂದು ಅವರು ಹೇಳಿದರು.

ಉನ್ನತ ಅಧಿಕಾರಿಗಳ ಮತ್ತು ರಾಜಕೀಯ ವ್ಯಕ್ತಿಗಳ ಸಭೆಯೊಂದು ರಚಿತವಾಯಿತು. ಆ ವ್ಯಕ್ತಿ ಮಾತನಾಡುವ ಭಾಷೆಯನ್ನು ಬಲ್ಲ ತಜ್ಞನೊಬ್ಬನನ್ನು ವಿಶೇಷ ವಿಮಾನದಲ್ಲಿ ಭಾರತದಿಂದ ಕರೆಸಿಕೊಳ್ಳಲಾಯಿತು. ಆ ಸಮಿತಿಯು ಮತ್ತು ಆ ವ್ಯಕ್ತಿಯು ನಡುವೆ ನಡೆದ ಸಂಭಾಷಣೆಯ ಕೆಲವಂಶವನ್ನು ಇಲ್ಲಿ ಕೊಡಲಾಗಿದೆ.—

ಸಮಿತಿ—"ವಿಶೇಷ್ಟ ಪ್ರವೇಶ ಪತ್ರವಿಲ್ಲದೆ ನೀನು ಇಲ್ಲಿಗೆ ಹೇಗೆ ಬಂದೆ ?"

ವ್ಯಕ್ತಿ—ಎಲ್ಲಿಗಾದರೂ ಹೋಗಬೇಕಾದರೆ ಪ್ರವೇಶ ಪತ್ರವೇಕೆ ಬೇಕು ? ಹಾಗೆಂದರೇನು ?

ಸಮಿತಿ—ಪ್ರಶ್ನೆ ಕೇಳಿದವರು ನಾವು.

ವ್ಯಕ್ತಿ—ನಾನೂ ಕೇಳಿದ್ದೇನೆ.

ಸಮಿತಿ—ನೀನು ಯಾರು ?

ವ್ಯಕ್ತಿ—ಹೇಳಲು ಸಾಧ್ಯವಿಲ್ಲ.

ಸಮಿತಿ—ಅದನ್ನು ತಿಳಿದುಕೊಳ್ಳುವ ವಿಧಾನ ನಮಗೆ ಗೊತ್ತಿದೆ. ಅದರಿಂದ ನಿನಗೆ ತೊಂದರೆಯಾದೀತು.

ವ್ಯಕ್ತಿ—ನನಗೆ ತೊಂದರೆಯಾಗಲು ಸಾಧ್ಯವೇ ಇಲ್ಲ. ಹೇಗಾದರೂ ತಿಳಿದುಕೊಳ್ಳಿ. ನಾನು ಯಾರು ? ಹಾಗಾದರೆ ನನ್ನನ್ನು ಕೇಳುವ ನೀವು ಯಾರು ?

ಸಮಿತಿ—ನಾವು ಯಾರೆಂಬುದನ್ನು ಲೋಕವೇ ಬಲ್ಲುದು. ನಮಗಿರುವ ಅಪರಿಮಿತ ಅಧಿಕಾರ, ಶಕ್ತಿ, ಜ್ಞಾನಗಳಿಗೆ ಲೋಕವೇ ಬೆರಗಾಗಿದೆ. ಗೌರವಿಸುತ್ತದೆ. ಹೆದರುತ್ತದೆ.

ವ್ಯಕ್ತಿ—ನಾನೂ ಕೂಡಾ ಯಾರೆಂಬುದು ಲೋಕಕ್ಕೇ ಗೊತ್ತು. ನಿಮಗೆ ತಿಳಿದಿಲ್ಲವೆಂದ ಮೇಲೆ ನಿಮ್ಮ ಜ್ಞಾನ ಎಂತಹದು ? ನಿಮ್ಮಂತಹವರನ್ನು ಕೋಟಿ ಕೋಟಿ ಕೋಟಿ ಜನರನ್ನು ನಾನು ಬಲ್ಲೆ. ನಾನಾರೆಂಬುದು ನಿಮಗೂ ತಿಳಿಯದು. ಸ್ವತಃ ನನಗೂ ತಿಳಿದಿಲ್ಲ. ತಿಳಿದಷ್ಟನ್ನು ಹೇಳಲು ಸಾಧ್ಯವಿಲ್ಲ.

ಸಮಿತಿ—ನಿನ್ನ ವಯಸ್ಸೆಷ್ಟು.

ವ್ಯಕ್ತಿ—ಅತ್ಯಲ್ಪರಾಗಿ ಫ್ರೆಡ್‌ಹಾಯ್ಲ್ ನಾರ್ಲೀಕರರ್
ಪ್ರತ್ಯೇಕ ರಳಿದರವರೆನಿಬರೆಂಬುದನರಿಯೆ
ಮರ್ತ್ಯಲೋಕದೊಳೊಗೆದರೈನೂರು ಐನ್‌ಸ್ಟೀನ
ರವರನಿತರೋಳ್ಮಡಿದರು
ಕ್ಷಿತ್ಯಾದಿ ಸೃಷ್ಟಿಕರ್ತರ ಕಂಡೆ ನಿಪ್ಪತ್ತು

ಸಮಿತಿ—ಅವರು ಯಾರು ?

ವ್ಯಕ್ತಿ—ವಾರಿಯೋಳ್ಮುಳುಗುವ...

ಸಮಿತಿ—ಅದು ಎಲ್ಲಿತ್ತು ?

ವ್ಯಕ್ತಿ—ಅದು ಎಲ್ಲೆಲ್ಲೂ ಇತ್ತು. ಅದರಿಂದ ಈ ಲೋಕದ ಉದ್ಭವವಾಯಿತು.

ಸಮಿತಿ—You are a quack. ವೈಜ್ಞಾನಿಕ ಸಂಶೋಧನೆಗಳಿಂದ...

ವ್ಯಕ್ತಿ—ನಿಮ್ಮ ವಿಜ್ಞಾನಿಗಳು ಸುಳ್ಳರಿರಬೇಕು. ಏಕೆಂದರೆ ಇದನ್ನೆಲ್ಲಾ ನಾನೇ ನೋಡಿದೆ.

ಸಮಿತಿ—ಆ ನೀರಿಗಿಂತ ಮೊದಲು ಏನಿತ್ತು ?

ವ್ಯಕ್ತಿ—ಅಗ್ನಿ.

ಸಮಿತಿ—ಅದು ಎಲ್ಲಿತ್ತು ?

ವ್ಯಕ್ತಿ—ವಾಯುವಿನಲ್ಲಿ.

ಸಮಿತಿ—ಅದು ?

ವ್ಯಕ್ತಿ—ಆಕಾಶದಲ್ಲಿ.

ಸಮಿತಿ—ಅದು ?

ವ್ಯಕ್ತಿ—ಅಹಂ ತತ್ವದಲ್ಲಿ.

ಸಮಿತಿ—ಅದು ?

ವ್ಯಕ್ತಿ—ಆತ್ಮನಲ್ಲಿ.

ಸಮಿತಿ—ಇದೆಲ್ಲಾ ಹಳೆಯ ಕಡತ. ಖ–ಭೌತಶಾಸ್ತ್ರದಲ್ಲಿ ನಡೆಯುತ್ತಿರುವ...

ವ್ಯಕ್ತಿ—ಖ ಎಂದರೆ ಆತ್ಮ.

ಸಮಿತಿ—ನೀನು ಭಾರತದಲ್ಲಿ ಪ್ರಚಲಿತವಾಗಿರುವ ಕೆಲವೊಂದು ದಂತ ಕಥೆಗಳನ್ನು ಪುನರುಚ್ಚರಿಸುತ್ತಿರುವೆ.

ವ್ಯಕ್ತಿ—ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಕಂಡದ್ದನ್ನು ಹೇಳುತ್ತಿದ್ದೇನೆ. ನೀವಾದರೆ ಕೆಲವು ಕಟ್ಟು ಕಥೆಗಳನ್ನು ಪ್ರಚುರಪಡಿಸುತ್ತಿರುವಿರಿ.

ಸಮಿತಿ—ಜಗತ್ತೇ ಅರಿತಂತೆ, ನಾವು ಬಹಿರಂಗವಾಗಿ ಪ್ರಯೋಗ ನಡೆಸಿ, ಚಂದ್ರ ಲೋಕವನ್ನು ತಲುಪುವ ಪ್ರಯತ್ನವನ್ನು ನಡೆಸಿದ್ದೇವೆ. ಪೌರ್ವಾತ್ಯ ರಾಷ್ಟ್ರಗಳು

ಇನ್ನೂ ಯಂತ್ರಯುಗದ ಮೊದಲ ಹೆಜ್ಜೆಯಲ್ಲಿವೆ.

ವ್ಯಕ್ತಿ—ನೀವಿನ್ನೂ ಚಂದ್ರಲೋಕವನ್ನು ತಲುಪುವ ಯತ್ನದಲ್ಲಿರುವಿರಿ. ನಾನಾದರೆ ಎಲ್ಲ ಲೋಕಗಳನ್ನು ನೋಡಿ, ಹಿಂತಿರುಗಿ ಭೂಮಿಗೆ ಬಂದಿದ್ದೇನೆ.

ಸಮಿತಿ—ಹಾಗಾದರೆ ನೀನು ಉಪಯೋಗಿಸಿದ ರಾಕೆಟ್ ಎಷ್ಟು ಶಕ್ತಿಯನ್ನು ಹೊಂದಿತ್ತು ? ಯಾವ ನೆಲೆಯಿಂದ ನೀನು ಹೊರಟೆ ?...

ವ್ಯಕ್ತಿ—ನಿಲ್ಲಿಸಿರಿ. ಆಕಾಶಯಾನಕ್ಕೆ ನಾವು ರಾಕೆಟ್ ಉಪಯೋಗಿಸಲಿಲ್ಲ. ಬೇರೆ ಲೋಕಕ್ಕೆ ಹೋಗಿಬಂದ ಮಾತ್ರಕ್ಕೆ ನನಗೆ ಯಾವ ವಿಧವಾದ ಹೆಮ್ಮೆಯೂ ಇಲ್ಲ. ನೀವು ಚಂದ್ರಗ್ರಹಕ್ಕೆ ಹೋಗಬೇಕೆಂದಿರುವುದು ಏಕೆ ?

ಸಮಿತಿ—ರಷ್ಯನ್ನರು ನಮಗಿಂತ ಮೊದಲೇ ಹೋದರೆ ನಮ್ಮ ಪ್ರತಿಷ್ಠೆಗೆ ಧಕ್ಕೆ...

ವ್ಯಕ್ತಿ...ರಷ್ಯನ್ನರು ಯಾರು ? ನೀವು ಯಾರು ? ನಿಮಗೆಂತಹ ಪ್ರತಿಷ್ಠೆ ? ಇದ್ದ ಊರನ್ನು ನೆಲವನ್ನು ಸರಿಯಾಗಿ ಕಟ್ಟಲು ಹೆದರಿ ಹೋಗುವಿರೋ...ಅಥವಾ...

ಸಮಿತಿ—ನೀನು ತುಂಬಾ ಅಜ್ಞಾನಿ. ಜ್ಞಾನವೇ ಶಕ್ತಿ. ತಾಂತ್ರಿಕ ಮತ್ತು ವೈಜ್ಞಾನಿಕ...

ವ್ಯಕ್ತಿ—ಜ್ಞಾನವೆಂದು ನೀವು ಯಾವುದನ್ನು ಕರೆಯುತ್ತೀರಿ? ಶಕ್ತಿ ಎಂದರೇನು?

ಸಮಿತಿ—ನಾವು ಮನಸ್ಸುಮಾಡಿದರೆ ಒಂದೇ ನಿಮಿಷದಲ್ಲಿ ಇಡೀ ಜಗತ್ತನ್ನೇ ನಾಶಮಾಡಬಲ್ಲೆವು.

ವ್ಯಕ್ತಿ—ನೀವೆಲ್ಲರೂ ಶುದ್ಧ ಅರಿವುಗೇಡಿಗಳೆಂದು ಕಾಣುತ್ತದೆ. ಇದೋ ನನ್ನನ್ನೇ ನೋಡಿ, ನಾನು ಬಾಹ್ಯಾಕಾಶದ ಎಲ್ಲ ತಾರೆ, ನೀಹಾರಿಕಗಳನ್ನೂ ನೋಡಿ ಬಂದಿದ್ದೇನೆ. ಎಂದ ಮಾತ್ರಕ್ಕೆ ನಾನೇನೂ ಮಹಾಜ್ಞಾನಿಯೆಂದು ಭಾವಿಸುತ್ತಿಲ್ಲ.

ಸಮಿತಿ—ನಿನಗೆ ಬುದ್ಧಿ ಸರಿಯಿದ್ದಂತೆ ಕಾಣುವುದಿಲ್ಲ. ನೀನು ಬೇರೆ ಲೋಕಗಳನ್ನ ನೋಡಿರುವೆನೆಂದು ಹೇಳುತ್ತಿರುವೆ. ರಾಕೆಟ್ ವಿಷಯವೂ ತಿಳಿಯದೆನ್ನುವೆ. ಇದು ಅಸಂಬದ್ಧ. ರಾಕೆಟ್ ಇಲ್ಲದೆ ನೀನು ಹೋಗುವುದೇ ಸಾಧ್ಯವಿಲ್ಲ.

(ಸಶೇಷ)

—ಅ. ರಾ. ಸೇ.

ಹೊಸ ದೇವರು

ಬರೆದವರು :

ರಾ ಮಿ

★

ನಾಗಜ್ಜಿ ಅವತ್ತೊಮ್ಮೆ ಮಾಘ ಮಾಸದಲ್ಲಿ ಪರಂಧಾಮ ಟೂರಿಸ್ಟ್ ಬಸ್ ಹತ್ತಿ ಯಾತ್ರೆಗೆ ಹೊರಟಿದ್ದಳಲ್ಲ, ಸುಬ್ರಹ್ಮಣ್ಯ ಧರ್ಮಸ್ಥಳ ಮುಗಿಸಿ ಪರ್ಯಾಯಕ್ಕೆ ಸರಿಯಾಗಿ ಉಡುಪಿ ತಲುಪಿದ್ದಳು. ಪರ್ಯಾಯದ ವೈಭವ, ಸಮುದ್ರಸ್ನಾನ ಎಲ್ಲವನ್ನೂ ಮುಗಿಸಿ ಊರಿಗೆ ಮರಳಿದಾಗ "ಏನಜ್ಜಿ ಯಾತ್ರೆಯ ವಿಶೇಷ ?" ಎಂದು ಕೇಳಿದ್ದಕ್ಕೆ ನಾಗಜ್ಜಿ ಉಡುಪಿ ಕೃಷ್ಣನನ್ನು ಕಂಡಿದ್ದು, ಸಮುದ್ರದಲ್ಲಿ ಮಿಂದಿದ್ದು— ಹೀಗೆ ಮಾಮೂಲಿನ ವರ್ಣನೆ ಮಾಡಿ ಸುಮ್ಮನಾದಳು. ಆದರೆ ಅವಳನ್ನು ಕರೆದು ಕೊಂಡು ಹೋದ ಗುಂಡ ಮಾತ್ರ ನಾಗಜ್ಜಿಗೆ ಉಡುಪಿಯ ಜಾತ್ರೆಯಲ್ಲಿ ಹೊಸ ದೇವರ ದರ್ಶನವಾದ ಸಮಾಚಾರ ತಿಳಿಸಿದ.

ರಾತ್ರಿ ರಥೋತ್ಸವದ ಸಮಯ. ವಿಪರೀತ ನೂಕು ನುಗ್ಗಲು ಉಡುಪಿಯ ರಥ ಬೀದಿಯಲ್ಲಿ. (ಆ ನೂಕು ನುಗ್ಗಲಿನಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯ ಆನಂದ ಪಡೆಯುತ್ತಾರಂತೆ.) ಗುಂಡ ನಾಗಜ್ಜಿಯ ಕೈ ಹಿಡಿದು ಅತ್ತಿತ್ತ ಕರೆದುಕೊಂಡು ಹೋಗುತ್ತಿದ್ದನಂತೆ. ಕೈಯಲ್ಲಿ ಏನನ್ನೋ ಹಿಡಿದು ಒಬ್ಬಾತನು ಬರುತ್ತಿದ್ದುದನ್ನು ಕಂಡು ಅಜ್ಜಿ 'ಕೃಷ್ಣಾ ಕೃಷ್ಣಾ' ಎಂದು ಕೈಮುಗಿದಳು. ಸ್ವಲ್ಪ ಹೊತ್ತಿನಲ್ಲಿ ಮತ್ತೊಬ್ಬ ಹಾಗೇನೇ ಏನೋ ಹಿಡಿದು ಆ ದಾರಿಯಾಗಿ ಸಾಗಿದ. ನಾಗಜ್ಜಿಗೆ ಕಣ್ಣು ಮಂದ. ಮತ್ತೊಮ್ಮೆ ಕೈ ಮುಗಿದು 'ಕೃಷ್ಣಾ ಕೃಷ್ಣಾ' ಎಂದಳು. ಆದರೆ ಉಳಿದವರಾರೂ ಕೈ ಮುಗಿಯಲಿಲ್ಲ. ಆಗ ನಾಗಜ್ಜಿ ಹೇಳಿದಳಂತೆ—

"ಇಲ್ನೋಡೋ ಗುಂಡ...ಅದೇನೋ ದೇವರನ್ನು ಹಿಡಕೊಂಡು ಒಬ್ಬಾತ ಹೋದನಿಲ್ಲ...ಯಾರೂ ಕೈ ಮುಗಿಯಲಿಲ್ಲ. ನೀನು ಕೂಡ ಮುಗೀಲಿಲ್ಲ. ಅದಕ್ಕೆ ಸರಿಯಾಗಿ ದೇವರು ಹಿಡಿದವನೂ ಷರಾಯಿ ಷರಟು ಹಾಕಿದ ಹಾಗೆ ಕಂಡಿತು. ಏನೋಪ್ಪ ಈ ಪೂಜಾರಿಗಳನ್ನ ಕಂಡರೆ ಹೀಗೆ ; ಜನಗಳೋ ಈ ತರಹ."

ಗುಂಡನೋ ಯಾವ ದೇವರು ಹೋದದನ್ನು ಕಾಣಲಿಲ್ಲ. "ನನಗೇನೂ ಕಾಣಿಸಲಿಲ್ಲವಲ್ಲ ಅಜ್ಜಿ" ಎಂದ.

ಅಷ್ಟರಲ್ಲಿ ನಾಗಜ್ಜಿ "ಅಗೋ ಇನ್ನೊಂದು ಬಂತು, ಇನ್ನೊಂದು ಬಂತು" ಎಂದು ಕೈತೋರಿಸ ತೊಡಗಿದಳು. ಆ ಕಡೆ ನೋಡಿದರೆ ಒಬ್ಬ ಉತ್ಸವದ ವಿಗ್ರಹ ಹಿಡಿದಂತೆ ಒಂದು ಟ್ರಾನ್ಸಿಸ್ಟರ್ ಹಿಡಿದು ಬರುತ್ತಿದ್ದ.

"ಅಯ್ಯೋ ಅಜ್ಜಿ ಅದು ದೇವರಲ್ಲ ರೇಡಿಯೋ" ಎಂದಾಗ ಆಕೆ ಕೈ ಕೆಳಗೆ ಬಿಟ್ಟಳು. "ಈಚೀಚೆಗೆ ಹೊಸದಾಗಿ ಟ್ರಾನ್ಸಿಸ್ಟರ್ ಕೊಂಡುಕೊಂಡ ಹೈದಗಳೆಲ್ಲ ಅವನ್ನು ಜಾತ್ರೆ, ಜನಜಂಗುಳಿಯಿದ್ದ ಕಡೆಯಲ್ಲೆಲ್ಲ ಎತ್ತಿಕೊಂಡು ತಿರುಗುವುದು ಒಂದು ಮೋಜು" ಎಂದು ವಿವರಿಸಿದ ಗುಂಡ.

"ರೇಡಿಯೋನೋ, ಏನು ಸುಟ್ಟದ್ದೋ...ಅಂತೂ ನಾನು ಕೈಮುಗಿದೆ ದೇವರಂತ..." ಎಂದರು ಅಜ್ಜಿ.

"ಹೊಸ ಕಾಲ ಅಜ್ಜಿ...ಹೊಸ ಜನ...ಹೊಸ ಹೊಸ ದೇವರುಗಳು... ತಿಳೀತೆ?" ಎಂದನಂತೆ ಗುಂಡ.

ತಾವು ಬರೆದಿರುವ ಅರ್ಥವೇನು ಎಂಬುವುದು ನವ್ಯ ಕವಿಗಳಿಗೆ ಎಷ್ಟೋ ಸರ್ತಿ ಗೊತ್ತಿರುವುದಿಲ್ಲವಂತೆ.

—ಅಂದರೆ, ಸರ್ಕಾರದ ಹುಕುಂಗಳಿದ್ದ ಹಾಗೆಯೇ!

*　　*　　*　　*

ವ್ಯಾಪಾರವೆಲ್ಲಾ ಜೊಳ್ಳು ಎಂದರಂತೆ ಅಕ್ಕಿ ಮಂಡಿಯವರು.

—ಅವರು ಮಾರುವ ಅಕ್ಕಿಯ ತರಹಾ ಇರಬೇಕು.

*　　*　　*　　*

ಮದ್ರಾಸಿನಲ್ಲಿ ಡೆಂಗ್ಯೂ, ಚಿಕನ್‌ಗುಯ ಜ್ವರಗಳಿದ್ದ ಕಾರಣ ಅಲ್ಲಿಂದ ಅಕ್ಕಿಯನ್ನು ನಮ್ಮ ಪ್ರಾಂತ್ಯಕ್ಕೆ ಕಳಿಸಲು ನಿರಾಕರಿಸಿದರಂತೆ.

—ಕಳ್ಳನಿಗೊಂದು ಪಿಳ್ಳೆ ನೆವ.

*　　*　　*　　*

ಸ್ವರ್ಗದಲ್ಲಿ ವಿವಾಹ ವಿಚ್ಛೇದನಗಳೇ ಇಲ್ಲವಂತೆ.

—ಆಶ್ಚರ್ಯಪಡಬೇಕಾಗಿಲ್ಲ. ಅಲ್ಲಿ ಲಾಯರುಗಳೇ ಇಲ್ಲವಲ್ಲ!

*　　*　　*　　*

ಎಚ್ಚರಿಕೆ ತೊಗೊಂಡರೂ

"ನಾನು ಹೋಗಿ ಕರಕೊಂಡು ಬರ್ತೀನಿ ಕಣೆ! ಬೆಳಗಿನ ಝಾವ ಇಷ್ಟು ಹೊತ್ತಿನಲ್ಲಿ ಮಂಜು ಬೀಳ್ತಾ ಇರುತ್ತೆ. ನಿನ್ನದು ಸೂಕ್ಷ್ಮ ಪ್ರಕೃತಿ. ಸ್ಟೇಷನ್ನಿಗೆ ನೀನು ಬರಲಿಲ್ಲ ಅಂತ ನಿಮ್ಮಣ್ಣ ಏನೂ ತಪ್ಪು ತಿಳಿದುಕೊಳ್ಳಲ್ಲ." ಅಂತ ಶಾಮ ರಾಯರು ತಮ್ಮ ಹೆಂಡತಿಗೆ ಬೆಳಗಿನ ಝಾವ ಐದು ಗಂಟೆಯಲ್ಲಿ ಬಿನ್ನವಿಸಿಕೊಳ್ಳುತ್ತಾ ಇದ್ದರು. ಬನಿಯನ್, ಷರ್ಟ್, ಸ್ವೆಟರ್, ಅಂಗಿ, ಅದರ ಮೇಲೆ ದಪ್ಪ ಶಾಲನ್ನು ಹೊದ್ದುಕೊಂಡು, ಕಿವಿ ಮುಚ್ಚುವ ಕುಲಾವಿ ಹಾಕಿಕೊಂಡು, ಶಾಮರಾಯರು ಸ್ಟೇಷನ್ನಿಗೆ ಹೊರಡಲು ಸಿದ್ಧವಾಗಿದ್ದರು. ತೆಳ್ಳಗಿರುವ ನೂಲಿನ ಸೀರೆ ಉಟ್ಟುಕೊಂಡು ನಾನೂ ಬರ್ತೀನಿ ಅಂತ ಅವರ ಹೆಂಡತಿ ಹಠ ಹಿಡಿದಿದ್ದರು.

ಆಗಲಿ, ಮಹರಾಯ್ತಿ, ಆದರೆ ಒಂದು ಸ್ವೆಟರನ್ನಾದರೂ ಹಾಕ್ಕೊಳ್ಳೆ, ಅಥವಾ ಶಾಲನ್ನಾದರೂ ಹೊದ್ದುಗೋ, ತಲೆಗೆ ಒಂದು ಕರ್ಚೀಫ್‌ನಾದರು ಕಟ್ಟುಕೋ, ಬಲು ಥಂಡಿ. ಅವರೂಪಕ್ಕೆ ನಿಮ್ಮಣ್ಣ ಬಂದಾಗ, ನೆಗಡಿ ಜ್ವರ ಕೆಮ್ಮು ಅಂತ ನೀನು ಮಲಗಿದರೆ ಚೆನ್ನೇನೇ" ಎಂದು ಶಾಮರಾಯರು ಬೇಡಿಕೊಂಡರು. ಆದರೆ ಅವರ ಹೆಂಡತಿ ಕೇಳಬೇಕಲ್ಲ! ನನ್ನ ದೇಹಸ್ಥಿತಿ ನೋಡಿಕೊಳ್ಳೋ ಅಷ್ಟು ನನಗೆ ತಿಳಿಯಲ್ವೇ ಹೀಗೆ ಇಲ್ಲಿ ವಾಗ್ವಾದ ಮಾಡ್ತಾ ಇದ್ದರೆ ರೈಲು ಬಂದು ಬಿಟ್ಟಿರುತ್ತೆ, ನಾವು ಸ್ಟೇಷನ್ ಸೇರೋಹೊತ್ತಿಗೆ, ಎಂದು ಅವರ ಹೆಂಡತಿ ಹೇಳ್ತಾ ಹೇಳ್ತಾ ಬಾಗಿಲು ತೆರೆದು ರಸ್ತೆ ಕಡೆಗೆ ಹೆಜ್ಜೆ ಹಾಕಿಯೇ ಬಿಟ್ಟಳು.

ಸ್ಟೇಷನ್ ತಲುಪಿದಾಗ, ಇನ್ನೂ ಅರ್ಧ ಗಂಟೆ ಆಗುತ್ತೆ ರೈಲು ಬರುಕ್ಕೆ ಅಂದರು. ಬಿಸಿ ಕಾಫೀನಾದರೂ ಕುಡಿಯೋಣ ಬಾರೇ ಅಂತ ಶ್ಯಾಮರಾಯರು ಇನ್ನಿಲ್ಲದ ಹಾಗೆ ಕೇಳಿಕೊಂಡರು. ಯಾರ್‍ಯಾರೋ ಮಾಡಿಟ್ಟ ಕಾಫೀನ ಈ ವಯಸ್ಸಿನಲ್ಲಿ ಕುಡಿದು ಜಾತಿ ಕೆಡು ಅಂತೀರಲ್ಲ ಅಂದ್ರೆ, ನನ್ನಿಂದ ಆಗುಲ್ಲ ನೀವು ಬೇಕಾದರೆ ಕುಡಕೊಂಡು ಬನ್ನಿ ಅಂದರು, ಹೆಂಡತಿ.

ರೈಲು ಬಂತು. ಅತಿಥಿ ಇಳಿದರು. "ನೀವ್ಯಾಕೆ ಈ ಧನುರ್ಮಾಸದ ಥಂಡೀಲಿ ಬಂದಿರಿ; ಮನೆ ಗೊತ್ತಿತ್ತು, ನಾನೇ ಬರ್‍ತಿದ್ದೆ" ಎಂದು ತಂಗೀಗೆ ಹೇಳುತ್ತಾ ಕ್ಷೇಮ ಸಮಾಚಾರ ವಿಚಾರಿಸಿದರು. ಎಲ್ಲರೂ ಮನೆಗೆ ಹೊರಟರು

ರೈಲಿನಲ್ಲಿ ದಣಿದು ಬಂದಿದ್ದಿರಿ. ನೀನು ಮೊದಲು ಸ್ನಾನ ಮಾಡಪ್ಪಾ ಅಂತ ಭಾವ ಮೈದುನನಿಗೆ ಶ್ಯಾಮರಾಯರು ಹೇಳಿದರು. ಅತಿಥಿಯು ಸ್ನಾನ ಮಾಡಿದಮೇಲೆ ಶ್ಯಾಮರಾಯರು ಸ್ನಾನಕ್ಕಿಳಿದರು. ಹಂಡೆನೀರು ಬೆಚ್ಚಗಿತ್ತು. ಅವರು ಸ್ನಾನ ಮಾಡಿದಮೇಲೆ ತಣ್ಣೀರನ್ನು ಹಂಡೆತುಂಬ ತುಂಬಿ ಹೊರಕ್ಕೆ ಬಂದರು. ಆಗ ಅವನ ಹೆಂಡತಿ ಸ್ನಾನಕ್ಕೆ ಅಂತ ಬಂದರು. "ಇದೇನೇ ? ನಿನ್ನ ಸ್ನಾನ ಆಗಿತ್ತಿಲ್ವೇ ! ಹಂಡೆ ತುಂಬಾ ತಣ್ಣೀರು ತುಂಬಿದನಲ್ಲೇ ! ಸ್ವಲ್ಪ ಹೊತ್ತು ಬಿಟ್ಟುಕೊಂಡು, ನೀರು ಕಾದ ಮೇಲೆ ಸ್ನಾನ ಮಾಡು" ಎಂದರು ಶ್ಯಾಮರಾಯರು, "ಸರಿ ಹೋಯ್ತು, ಒಂದಿನ ನೀರು ಸ್ವಲ್ಪ ತಣ್ಣಗಿದ್ದರೆ ಏನಾಗುತ್ತೆ" ಎಂದು ಹೆಂಡತಿ ಬಚ್ಚಲ ಮನೆಗೆ ನುಗ್ಗಿಯೇ ಬಿಟ್ಟಳು, "ತೆಳ್ಳಗಿದ್ದಿ ಕಣೆ ನೀನು, ತಣ್ಣೀರಿನಲ್ಲಿ ಸ್ನಾನ ಮಾಡಿದರೆ ಸೀತ ಹಿಡಿಯಬಹುದು. ಅಂತಹಾ ಅವಸರ ಏನೇ" ಎಂದು ಶ್ಯಾಮರಾಯರು ಹೇಳುತ್ತಾ, ಇರುವಾಗಲೇ ಹೆಂಡತಿ ಬಚ್ಚಲ ಮನೆ ಬಾಗಿಲನ್ನು ಹಾಕಿಕೊಂಡೇಬಿಟ್ಟರು.

ಬೆಳಿಗ್ಗೆ ೮ರ ಹೊತ್ತಿಗೆ ಶ್ಯಾಮರಾಯರಿಗೆ ಮತ್ತು ಅಣ್ಣನಿಗೆ ತಿಂಡಿ, ಕಾಫಿ ತಂದುಕೊಟ್ಟಳು. "ಇದೇನೇ ಸೀರೆ ಒದ್ದೆ ಇದ್ದ ಹಾಗಿದೆ," ಎಂದರು ಶ್ಯಾಮರಾಯರು. ಮಡಿಗೆ ಹಾಕಿದ್ದೆ ಈ ಸೀರೇನ, ನಿನ್ನೆ ಪೂರ್ತಿ ಒಣಗಿಲ್ಲ ಅಂದರೆ, ಈಗ ಒಣಗಿ ಹೋಗುತ್ತೆ" ಎಂದಳು ಹೆಂಡತಿ. "ನಿನ್ನ ತಂಗೀಗೆ ಸ್ವಲ್ಪ ಬುದ್ಧಿ ಹೇಳಬೇಕಪ್ಪ, ಸೀತ ಆಗುತ್ತೆ, ನೆಗಡಿ ಕೆಮ್ಮು ಬರುತ್ತೆ. ಹುಷಾರಾಗಿರೆ ಅಂತ ಎಷ್ಟು ಹೇಳಿದರೂ ಕೇಳುಲ್ಲ, ಕೆಮ್ಮಿದರೆ ಕೆಳಗೆ ಬೀಳೋ ಹಾಗಿದ್ದಾಳೆ. ಸ್ವಲ್ಪವೂ ಎಚ್ಚರ ಬೇಡವೇ" ಎಂದು ಶ್ಯಾಮರಾಯರು ಹೆಂಡತಿಮೇಲೆ ಭಾವಮೈದುನನಿಗೆ ಆದರದ ಚಾಡಿ ಹೇಳಿದರು.

* * * *

ನಾಲ್ಕೈದು ಸರ್ತಿ ಸಂಜೆ ಮುಂದೆ ಶ್ಯಾಮರಾಯರು ಸೀನಿದರು. ಯಾಕೋ ತಲೆ ನೋವುತ್ತೆ ಕಣೆ ಅಂದರು. ಮನೇಲೇ ಮಲಗಿರ್ತೀನಪ್ಪ, ರಂಗರಾಯರ ಮನೆಗೆ ನೀನೇ ಹೋಗಿ ಬಾಪ್ಪ ಎಂದು ಭಾವಮೈದುನನಿಗೆ ಹೇಳಿದರು. ರಂಗರಾಯರ ಮನೆಯಿಂದ ಭಾವಮೈದುನ ಹಿಂತಿರುಗುವ ಹೊತ್ತಿಗೆ ಶ್ಯಾಮರಾಯರಿಗೆ ಹೆಂಡತಿ ಮೆಣಸಿನ ಸಾರು ಕುಡಿಸುತ್ತಾ ಇದ್ದಳು. ಅರಿಸಿನದ ಪಟ್ಟನ್ನು ಹಣೆಗೆ ಬಳಿಯುತ್ತಿದ್ದಳು.

ಎಚ್ಚರಿಗೆ ತೊಗೊಂಡಷ್ಟೂ ಬೇನೆ ಬೀಳಬಹುದೆ, ಹೀಗೆ ?

—ಪ್ರಸಾದ್

ಕು ಚೇ ಲೋ ಪಾ ಖ್ಯಾ ನ

★

ಮೈಳೂರು ಪ್ರಾಂತ್ಯದ ಕೊನೆ ಮೂಲೆ ಕುಗ್ಗಿಹಳ್ಳಿಯಲ್ಲಿ ಕುಚೇಲಪ್ಪ, ಮಿಡಲ್ ಸ್ಕೂಲ್ ಮಾಸ್ತರು. ಮೆಚ್ಚಿನ ಮಡದಿ, ಮನೆ ತುಂಬ ಮಕ್ಕಳು, ಮೂಗಿನವರೆಗೆ ಬಡತನ, ಮೈತುಂಬ ಸಾಲ!

"ಏನೊಂದ್ರೆ? ಎಷ್ಟು ದಿನಾಂತ ಈ ಕಾರ್ಪಣ್ಯ ಪಡೋದು? ನಿತ್ಯ ಹೇಳ್ತೀನಿ—ಕುಂಬ್ಳೂರಿಗೆ ಹೋಗಿಬನ್ನಿ, ಕ್ರಿಷ್ಣಯ್ಯನ್ನ ಕಂಡು ಬನ್ನಿ; ಚಿಕ್ಕಂದಿನಲ್ಲಿ ಅಷ್ಟು ಸ್ನೇಹವಾಗಿದ್ದೋರು ಅಂತೀರಿ—ಅಯ್ಯೋ ಪಾಪ ಅಂದಾನು, ಏನನ್ನ ಮಾಡಿಯಾನು—ಅಂತ!...ಕಿವೀ ಮೇಲೇ ಹಾಕ್ಕೊಳ್ಳಲ್ಲ ನೀವು!"

"ಹಾಗಂತೀಯ ಸುಶೀಲಾ?...ಏನೋ ಸಂಕೋಚ ನೋಡು, ಹಿಂದಲೇಟು ಹೊಡೆಸತ್ತೆ!...ಹುಂ, ಹೋಗಲಿ. ನಿನ್ನ ಮಾತು ಕೇಳೇಬಿಡ್ತೀನಿ...ಬೆಳಗ್ಗೆ ಬಸ್ಸಿಗೆ ಹೊರಟೆ!...ಅಂದ ಹಾಗೇ, ಬಾಲ್ಯ ಗೆಳೆಯನ್ನ ಬರೀ ಕೈಲಿ ಹೇಗೇ ಸೂಶೀ, ನೋಡೋದು?"

"ಮನೇಲೇನೂ ಇಲ್ವಲ್ಲಾಂದ್ರೇ—ಹೇಳಿ ಕೇಳಿ ಕುಚೇಲ alias ಸುಧಾಮನ ಮನೆ!"

"...ಮೊನ್ನೆ ಖಾರಾಪುರಿ ಮಾಡಿದ್ಯಲ್ಲ—ಏನಾದರೂ ಮಿಕ್ಕಿದೆಯೇನು?"

"ನೋಡ್ತೀನಿ ಇರಿ...ಎಲ್ಲ ಮುಕ್ಕಿಬಿಟ್ಟಿವೆ ಹುಡುಗರು...ಒಂದೇ ಒಂದು ಹಿಡಿ ಮಿಕ್ಕಿದೆ!"

"ಪರವಾಗಿಲ್ಲ, ಅದೇ ಕೊಡು—ಕಿಷ್ಟನಿಗೆ ಖಾರಾಪುರಿ ಅಂದರೆ ಬಲು ಇಷ್ಟ. ಓದುತ್ತಿದ್ದಾಗ, ಅವರಜ್ಜೀನ ಪುಸಲಾಯಿಸಿ. ಸ್ಕೂಲಿಗೆ ಜೇಬಿನ ತುಂಬ ತುಂಬಿಕೊಂಡು ಬರ್ತಿದ್ದ!...ಇಗೋ, ಈ ಚೌಕದಲ್ಲಿ ಕಟ್ಕೊಡು."

"ಸಧ್ಯ ಅದು ಬೇಡಿ; ನಶ್ಯದ ನಾತ ಬಡೀತದೆ...ಬೇರೆ ಬಟ್ಟೇಲಿ ಕಟ್ಟಿ ಕೊಡ್ತೀನಿ!"

ಕುಚೇಲಪ್ಪ, ಕುಂಬ್ಳೂರಿಗೆ ಬಂದ. ಮಂತ್ರಿ ಕ್ರಿಷ್ಣೈಯ್ಯನವರ ಮನೆ ಪತ್ತೆಹಚ್ಚಿ, ಹೆಬ್ಬಾಗಿಲಿಗೆ ಬಂದು ನಿಂತ. ದವಾಲಿ ಜವಾನ ಹುರಿ ಮೀಸೆ ತಿರುವುತ್ತ "ಯಾರಯ್ಯ ನೀನು?" ಎಂದು ಕೆಂಗಣ್ಣು ಬೀರಿದ. ರಿಜರ್ವ್ ಪೋಲೀಸ್ "ನಿಲ್ಲು

ನಿಲ್ಲು!" ಎನ್ನುತ್ತ ಬಂದೂಕನ್ನೆತ್ತಿ ಅಡ್ಡವಾಗಿ ಹಿಡಿದ! ಅಲ್ಲೇ ಸುಳಿದಾಡುತ್ತಿದ್ದ ಸೀಳುನಾಯಿ, ಹುಲಿಯಂತೆ ಮೇಲೇರಿತು. ಕುಚೇಲಪ್ಪ "ನಾ...ನಾ...ನಾನ್..." ಎಂದು ತೊದಲುತ್ತಿರುವಾಗ್ಗೆ—ದೇವರ ದಯ!—ಕಾರಿನಲ್ಲೇ ಕೂತು ಹೊಸ ಹವೆಯ ಸೇವನೆಗೆಂದು ಹೊರಗೆಹೋಗಿದ್ದ ಮಂತ್ರಿಗಳ ಸವಾರಿ ಅಂಬಾಸಡರ್‌ನಲ್ಲಿ ಚಿತ್ತೈಸಿತು.

"ಆ?...ಯಾರು?...ಕುಚೇಲ!..." ಕಾರಿನಿಂದ ಒಂದೇ ನೆಗೆತಕ್ಕೆ ತಮ್ಮ ಸ್ಥೂಲಕಾಯವನ್ನು ಉರುಳಿಸಿ, ಮಂತ್ರಿಗಳು ಮಿಡಲ್ ಸ್ಕೂಲ್ ಮಾಸ್ತರನ್ನು ತಬ್ಬಿದಾಗ—ಮೀಸೆ, ದವಾಲಿ, ಬಂದೂಕು, ಎಲ್ಲವೂ ತಿರಸ್ಕಾರದಿಂದ ನೋಡಿದುವು! ಸೀಳುನಾಯಿ ಕೂಡ, "ಪರಮ ಅನ್ಯಾಯ" ಎನ್ನುವ ಧಾಟಿಯಲ್ಲಿ ಕಿರುಗುಟ್ಟುತ್ತ ಬಾಲವಾಡಿಸಿತು!

ಕೊಳಕು ಬಟ್ಟೆಯ ಕುಚೇಲಪ್ಪನಿಗೆ ಮಂತ್ರಿ ಭವನದ ಡ್ರಾಯಿಂಗ್ ರೂಮ್‌ನ ಸೋಫದ ಮೇಲೆ ಕೂರಲು ಸಂಕೋಚ!... "ಕೂಡೋ ಕುಚೇಲಾ!" ಎಂದು ಕ್ರಿಷ್ಣಯ್ಯನವರು ಬಲವಂತದಿಂದ ಕೂಡಿಸಿದರು.

"ಅಂತೂ, ಇಷ್ಟು ದಿನಾ ಆದರೂ—ಇಂಥಾ ಪದವೀಲಿದ್ರೂ—ನನ್ನ ಮರೆತಿಲ್ವಲ್ಲ ಕಿಷ್ಟ ನೀನು!"

"ಉಂಟೇನೋ ಕುಚೇಲ! ಪ್ರತಿ ಪರೀಕ್ಷೇಲೂ ನಿನ್ನ ಮಗ್ಗುಲಲ್ಲೋ, ನಿನ್ನ ಬೆನ್ನ ಹಿಂದೇ ಕೂತು, ಕಾಪಿ ಹೊಡೆದು, ಗ್ರಾಜುಯೇಟ್ ಅನ್ನಿಸ್ಕೊಂಡದ್ದು ನಿನ್ನಿಂದಲ್ವೇನೋ? ನಿನ್ನ ಮರೆತರೆ, ಮೇಲಿರೋ ಆತ ನನಗೆ ಒಳ್ಳೇದು ಮಾಡಿಯಾನೇ! ಅದ್ಸರಿ, ನೀನೆಲ್ಲಿದ್ದೀ, ಏನು ಕೆಲಸ, ಏನ್ಕಥೆ...? "

ಮಾಸ್ತರು ಆತ್ಮ ಕತೆಯನ್ನು ತೋಡಿಕೊಂಡರು.

"ಇದೇನಾ ನಿನ್ನ ಹಣೇ ಬರಹ? ಉದ್ದಕ್ಕೂ ಫಸ್ಟ್‌ಕ್ಲಾಸ್‌ನಲ್ಲಿ ಪಾಸ್‌ಮಾಡಿ ಮೆಡಲ್ ಗಿಟ್ಟಿಸಿದೆಯಲ್ಲ 'ಎಮ್ಮೆ'ಲಿ—ಇಷ್ಟಕ್ಕೇ ತಾನೇ?...ಅದಕ್ಕೇ ನಾನು ಹೇಳ್ತಿದ್ದದ್ದು ಓದುವಾಗ—ಗಂಟಲು ಎಷ್ಟು ಹರಕೊಂಡರೇನು, ಹಣೇ ಮೇಲಿನ ಗೆರೆ ಮುಖ್ಯ ಅಂತ!...ನೀನು ಕಂಡ ಹಾಗೇ, Brilliant career ನಂದು; ಪ್ರತಿ ಕ್ಲಾಸ್‌ನಲ್ಲೂ Halt ಬೋರ್ಡ್! 'ಕುಂಟಕಿಷ್ಟ' ಅಂತ್ಲೇ ನಮ್ಮಪ್ಪ ಕೂಗಕ್ಕೆ ಷುರು ಹಚ್ಚಿಬಿಟ್ಟಿದ್ದ...ಈಗ ನೋಡು!...ಆಯ್ತು, ಅತ್ತಿಗೆಮ್ಮ ನನಗೇನೂ ಕಳಿಸಿಲ್ವೇ?"

"ಹೆ ಹೆ ಹೆ ಹೆ!...ಏನೋ ಒಂದಿಷ್ಟು...ಖಾರಾಪುರಿ..."

"ಭೇಷ್! ನನ್ನ favourite ತಿಂಡೀನೇ ತಂದಿದೀಯ! ಕೊಡಿಲ್ಲಿ!"

* * * *

ಕುಚೇಲಪ್ಪನಿಗೆ ಆದರಾತಿಥ್ಯವಾಯಿತು. ಮೂರು ದಿನಕ್ಕೊಂದು ಸಲ ನೀರು ಕಾಣದ ಮೈಗೆ Tub Bath ಘಮ ಘಮಿಸುವ ಸೋಪು. ಷಾಂಪೂ, ತೈಲಗಳು;

ಮಂತ್ರಿಗಳ second-hand ಧೋತರ, ಜುಬ್ಬ, ತಲೆಗೆ ಗರಿಗರಿ ಬಿಳಿ ಟೋಪಿ ಮಿರುಮಿರುಗುವ ಕರಿ ಮರದ ಮೇಜಿನ ಮುಂದೆ ರಸಗವಳ! ಅಲ್ಲದೆ, ಮಂತ್ರಿಗಳ ಪ್ರವಾಸದಲ್ಲಿ ರಾಜಾತಿಥ್ಯ : ಮಧ್ಯೆ ಟೀಪಾರ್ಟಿಗಳು, ಡಿನ್ನರುಗಳು! ಎರಡು ವಾರದ ಹೊತ್ತಿಗೆ ಕಡ್ಡಿ ಕುಮಾರ ಕುಚೇಲಪ್ಪ, ಉಂಡೋದರ ಗುಂಡುವಾದ!

"ನನ್ನದೇನೋ ನೇರ್ಪಾಯ್ತು ಕಿಷ್ಟ! ಆದರೆ...ನನ್ನ ಹೆಂಡತಿ ಮಕ್ಕಳು..."

"ಇಷ್ಟು ದಿನ ಏಕೆ ಸುಮ್ಮನಿದ್ಯೋ?...ಆ?...ನಿನ್ನ ಹೆಂಡತಿ ಓದಿ ಬರೆ ದಿದಾಳೇನು ?

"ಇಂಟರ್ ಮಾಡಿದಾಳೆ; ಅಷ್ಟರಲ್ಲಿ, ನನ್ನಂಥಾ ವರನಿಗಿಂತ, ನಂಟೇ ಅಂತ, ಅವರಪ್ಪ ನನಗೆ ಗಂಟು ಹಾಕಿಬಿಟ್ಟ!"

"ಒಳ್ಳೇದಾಯ್ತು, ಮೊದಲು ಕರೆಸು...ನಾನು ಮಂತ್ರಿ ಆಗ್ತೀನಿ ಅಂತ ಕನಸ್ನಲ್ಲೂ ಯೋಚಿಸ್ದೇ ಇದ್ದ ನಮ್ಮಪ್ಪ—ಒಂದು ಹಳ್ಳೀ ಗೊಡ್ಡನ್ನ ನನಗೆ ಗಂಟು ಹಾಕಿದಾನೆ...ಈಗ ಆಕೇನ ಅಧ್ಯಕ್ಷತೆ, ಆರಂಭೋತ್ಸವ, ಶಂಕುಸ್ಥಾಪನೆ, ಬಹುಮಾನ ವಿನಿಯೋಗ—ಅಂತ ಕರೀತಾರೆ. ಆಕೇಗೆ, ಹೆಬ್ಬೆಟ್ಟು ಒತ್ತೋದು ಬಿಟ್ಟು ರುಜು ಸಹ ಮಾಡಕ್ಕೆ ಬರಲ್ಲ!...ಇನ್ನು ಮೇಲೆ ನಿನ್ನ ಹೆಂಡತಿ ಇವಳಿಗೆ companion ಅಂತಾರಲ್ಲ ಹಾಗಿರ್ಲಿ! ಹೋದಲ್ಲಿ ಬಂದಲ್ಲಿ ಭಾಷಣ ಬಿಗೀಲಿ ಅವಳ ಪರವಾಗಿ...ಆ?"

"ಆಮೇಲೆ...ಮಕ್ಳು...?"

"ಅವರನ್ನೂ ಕರೆಸೋ. ಎಲ್ಲರಿಗೂ ಇಲ್ಲಿ ಉದ್ಯೋಗ ಸಿದ್ಧವಾಗಿದೆ!

ಕುಚೇಲಪ್ಪ, ಮಾಸ್ತರಿಕೆಗೆ ರಾಜೀನಾಮೆಯಿತ್ತ, ಆತ, ಈಗ ಕ್ರಿಷ್ಟೈಯ್ಯನವರ ಖಾಸಾ ಕಾರ್ಯದರ್ಶಿ; ಸುಶೀಲಮ್ಮ ಮಂತ್ರಿಣಿಯ Mouth ಪೀಸು: ಮೊದಲ ಮಗ ಮಂತ್ರಿವರ್ಯರ ಭಾವಮೈದುನನ ಹೆಸರಿನಲ್ಲಿರುವ ಸಿನಿಮಾ ಮಂದಿರದ ಮೇನೇಜರು; ಎರಡನೆಯವ—ಕ್ರಿಷ್ಟೈಯ್ಯನ ಅಳಿಮಯ್ಯನ ನಾಮಧೇಯದಲ್ಲಿರುವ ನಾಲ್ಕಂತಸ್ತಿನ ಹೋಟಲ ಮೇಲುಸ್ತುವಾರಿಗಾಗಿ ನೇಮಿತ; ಮೂರನೆಯವ—ಅವರ ತಮ್ಮನ ಹೆಸರು ಹೊತ್ತಿರುವ ಹತ್ತಿ ಬಟ್ಟೆ ಮಿಲ್ಲಿನ ಮುಖ್ಯಾಧಿಕಾರಿ!

* * * *

ಅಂದ ಹಾಗೇ ಪೌರಹಿತ ಸಮಿತಿಯವರು ಹರಾಜಿನಲ್ಲಿ (?) ಹಂಚಿದ ಸೈಟೊಂದರಲ್ಲಿ ಕ್ರಿಷ್ಟೈಯ್ಯನವರು ಕಟ್ಟಿಸಿದ ಭವ್ಯ ಸೌಧವನ್ನು ಇತ್ತೀಚೆಗೆ ನೀವು ನೋಡಿರಬೇಕಲ್ಲವೇ ? ಅದರ ಮಗ್ಗುಲ ಮರಿ ಸೌಧವೇ ಕುಚೇಲಪ್ಪನದು!

ದ್ವಾಪರಯುಗಕ್ಕಿಂತ, ಕಲಿಯುಗದ ಕೃಷ್ಣ—ಕುಚೇಲ ಬಾಂಧವ್ಯವೇ ಚೆನ್ನು, ಅಲ್ಲವೇ ?

—ಟಿ. ಸುನಂದಮ್ಮ.

ಮಹಾಲಯ ಅಮಾವಾಸ್ಯೆ ಎಲ್ಲೋ ಇದೆ ಅನ್ನೊವಾಗಲೆ ನಾಗಪ್ಪಯ್ಯನ ಮನೆಗೆ ನೆಂಟರು ದಸರಾ ನೋಡುವುದಕ್ಕೆಂದು ಬಂದಿಳಿದಿದ್ದರು. ಸಾಕಷ್ಟು ಸ್ಥಿತಿವಂತನಾಗಿದ್ದ ಆತನ ಮನೇಲಿ ಜನಕ್ಕೇನೂ ಅಭಾವ ಇರಲಿಲ್ಲ.ಮನೆತುಂಬ ಮಕ್ಕಳು ಮರಿ. ಬಂದು ಹೋಗೊ ನೆಂಟರಿಷ್ಟರು ಅಂತ ಯಾವಾಗಲೂ ಗಲಾಟೆ ಇದ್ದೇ ಇರುತಿತ್ತು. ಈ ಜಾತ್ರೆ ಜನಕ್ಕೆಊಟ ತಿಂಡಿಗಳ ವ್ಯವಸ್ಥೆಮಾಡಲು ವರ್ಷದ ಬಹು ದಿನಗಳು ಬಸುರಿಯೋ ಇಲ್ಲವೇ ಬಾಣಂತಿಯೋ ಆಗಿರುತಿದ್ದ ತನ್ನ ಹೆಂಡತಿಯ ಕೈಲಿ ಸಾಧ್ಯವಾಗದ ಕೆಲಸ ಎಂದು ಪಾಕಶಾಲೆಯ ಪಾರುಪತ್ಯಕ್ಕೆಂದೇ ಮೊಸಲಾಗಿ ತನ್ನ ಹತ್ತಿರ ಸಂಬಂಧಿಕರಾದ ಇಬ್ಬರು ವಿಧವೆಯರನ್ನ ನಿಯಮಿಸಿದ್ದನು ಪಾತಕ್ಕ ಸುಬ್ಬಚ್ಚಿಗಿಂತ ಕೊಂಚ ವಯಸ್ಸಿನಲಿ ಹಿರಿಯರು. ಇಬ್ಬರೂ ಸೇರಿ ಮನೆಗೆಲಸವನ್ನು ಅಡ್ಡಾದಿಡ್ಡಿಯಾಗಿ

ತೂಗಿಸಿಕೊಂಡು ಹೋಗುತ್ತಿದ್ದರೂ ಪರಸ್ಪರ ಸ್ವಭಾವಗಳಲ್ಲಿ ವೈಷ್ಯಮ್ಯದ ವೈಪರಿತ್ಯವನ್ನೇ ತೋರಿಸುತ್ತಿದ್ದರು "ಸುಬ್ಬಿ ಇದೇನಂತ ಉಪಕರಣ ಬೆಳಗಿದೀಯೋ. ಆಗಿದ್ದ ಮಸಿಯೆಲ್ಲಾ ಇದ್ದಹಾಗೇ ಇದೆ" ಎಂದು ಪಾತಕ್ಕ ಊರಗಲ ಬಾಯಿತೆಗೆದು ಸುಬ್ಬಚ್ಚಿ ಅರ ಒರಕಲಾಗಿ ತೊಳೆದಿರೋ ಪಾತ್ರೆಗಳನ್ನ ತೋರಿಸಿದರೆ ಆಯ್ಯೋ" ಬಿಡಿ ಪಾತಕ್ಕ ನಿಮಗೆ ಬೇಕಾದಾಗ ಕಣ್ಣು ಕಾಣೆಸುತ್ತೆ ಇಲ್ಲದೆ ಇದ್ದಾಗ ಮಂಜು ಕವಿಯುತ್ತೆ. ಮೂಲೆಯಲ್ಲಿ ಎಲ್ಲೊ ಇರೊತಟಕು ಮಸಿ ಕಂಡ ಕಣ್ಣಿಗೆ ರಾತ್ರಿ ಕಸಮುಸರೆ ಮಾಡೋವಾಗ ಒಲೆತುಂಬ ಆಗಳಿರೋದು ಕಾಣೆಸಲಿಲ್ಲ ಎಂದು ಸದಾ ಹೊರಗೆ ನೋಡುತ್ತೇವೆ ಎನ್ನುವ ಹಲ್ಲುಗಳನ್ನು ಮತ್ತಷ್ಟು ಹೊರಕ್ಕೆ ಚಾಚಿ ಸುಬ್ಬಚ್ಚಿ ಅವರ ಬಾಯಿ ಮುಚ್ಚಿಸುತ್ತಿದ್ದಳು.

ಊಟದ ವೇಳೆಯಲ್ಲಿ ಮತ್ತು ಇಬ್ಬರಿಗೂ ಅನ್ವಯಿಸುವಂತಹ ಕಷ್ಟ ಬಂದಾಗ ಪಾತಕ್ಕ ಸುಬ್ಬಚ್ಚಿಯರ ನಡುವಣ ಒಗ್ಗಟ್ಟು ನೋಡುವುದಕ್ಕೇ ಬಲು ಮೋಜು.

"ಸುಬ್ಬಿ, ಒಂದು ಹನಿ ತುಪ್ಪ ಜಾಸ್ತಿ ಹಾಕ್ಕೋ ಬಾಯಿ ಹುಣ್ಣು ಅಂತ ನಿನ್ನೆ ಸಾರನ್ನು ಸೋಕಿಸಲೇ ಇಲ್ಲ ನಾಲಿಗೆಗೆ" ಎಂದು ಪಾತಕ್ಕ ಉಪಚಾರ ಮಾಡುತ್ತಿದ್ದರು.

ಸುಬ್ಬಚ್ಚಿಯೂ ಪ್ರತಿಯಾಗಿ ಹುಳಿಯಹೋಳುಗಳು ಪಾತಕ್ಕನ ಎಲೆಗೆ ಹೆಚ್ಚಾಗಿ ಬೀಳಿಸುವ ಬಂದೊಬಸ್ತು ಮಾಡುತ್ತಿದ್ದಳು

ಅಮಾವಾಸ್ಯೆಯದಿನ ಬೆಳಿಗ್ಗೆ ಸುಬ್ಬಚ್ಚಿ ಕಸಮುಸರೆ ಮಾಡಿ ದೇವರಪೂಜೆಮಾಡುವ ಆಚಾರಿಗೆ ಎಲ್ಲಾ ಅಣಿಮಾಡಿಕೊಂಡು ಎರಡು ಸೇರು ಕಡಲೆ ಬೇಳೆ ರುಬ್ಬಿ ಆಂಬೊಡೆ

ಕರಿದು ಮುಗಿಸಿದರೂ ಪಾತಕ್ಕನ ಅಡುಗೆ ಇನ್ನೂ ಮುಗಿದಿರಲಿಲ್ಲ. ಒಬ್ಬರನ್ನೊಬ್ಬರು ಮನಸ್ಸಿ ಹೀಯಾಳಿಸುತ್ತಲೇ ಮನೆಯವರಿಗೆ ಮೂರುಗಂಟೆಗೆ ಊಟ ಕಾಣಿಸಿದರು ಇವರ ಊಟದ ಹೊತ್ತಿಗೆ ಸಂಜೆ ಬರಲೇ ಎಂದು ಇಣುಕಿ ನೋಡುತ್ತಿತ್ತು. ಬೆಳಿಗೆ ಯಿಂದ ಒಂದೇ ಸಮನೆ ಕತ್ತೆ ದುಡಿದ ಹಾಗೆ ದುಡಿದು ದಣಿದಿದ್ದ ಇಬ್ಬರಿಗೂ ಆಯಾಸದಿಂದ ಅನ್ನಾ ಸಾರು ಬಿಟ್ಟು ಬೇರೇನೂ ಬಾಯಿಗೆ ಇಳಿಯುವಂತಿರಲಿಲ್ಲ. ಮಾರನೆ ದಿವಸದ ಊಟದ ಬಾಳೂಇದೇನೆ ಪಾಡ್ಯದ ದಿನ ಒಬ್ಬಟ್ಟು ಬೋಂಡದ ಅಡುಗೆಯೇ ಆಗಬೇಕೆಂದು ನಾಗಪ್ಪಯ್ಯನ ಸುಗ್ರೀವಾಜ್ಞೆಯಾಗಿತ್ತು. ರಾತ್ರಿ ಫಲಹಾರ ಮಾಡುವಾಗಲಾದರು ಒಂದು ಹತ್ತು ಆಂಬೋಡೆ ಹೊಟ್ಟೆಗೆ ಸೇರಿಸಬೇಕೆಂದು ಇಬ್ಬರೂ ಸಮಾಧಾನ ಮಾಡಿಕೊಂಡರು,

ರಾತ್ರಿ ಬರುವುದರೊಳಗೇ ನಾಗಪ್ಪಯ್ಯನ ಕಿರಿಯ ಹುಡುಗ ರಾಮು ಎಲ್ಲರಿಗೂ ಕಾಣುವಂತೆ ಆಂಬೋಡೆ ಕರೆದಿಟ್ಟಿದ್ದ ಬೇಸಿನನ್ನು ಮುಟ್ಟಿಯೇಬಿಟ್ಟ. ಪಾತಕ್ಕ ಸುಬ್ಬಚ್ಚಿ ಇಬ್ಬರಿಗೂ ಅಕಾಶವೇ ಕಳಚಿ ಬಿದ್ದ ಹಾಗೆಆಯ್ತು, ಆ ದಿನದ ಆಂಬೋಡೆ ಬಲು ರುಚಿಯಾಗಿತ್ತೆಂದು ತಿಂದವರೆಲ್ಲಾ ಬಾಯಿ ತುಂಬಾ ಹೊಗಳಿದ್ದರು. ಅದನ್ನು ತಿನ್ನುವ ಭಾಗ್ಯ ಆದರ ಸೃಷ್ಟಿಕರ್ತರಾದ ತಮಗೇ ಇಲ್ಲವಲ್ಲಾ ಎಂದು ಇಬ್ಬರೂ ಮೈಲಿಗೆ ಮಾಡಿದ ಹುಡುಗನ ಮೇಲೆ ಸಿಕ್ಕಾಪಟ್ಟೆ ಕೂಗಾಡಿದರು. ಅವನನ್ನು ಬಡಿದು ಚೆಚ್ಚುವ ಅಧಿಕಾರ ತಮಗೆ ಇಲ್ಲವಲ್ಲಾ ಎಂದು ಬುಸುಗುಟ್ಟಿದ್ದರು.ಬೇಕಾದ ಹಾಗೆ ಬೈದು ಅವರೇ ಬಾಯಿ ನೋಯಿಸಿ ಕೊಳ್ಳಲಿ ಎಂದು ನಾಗಪ್ಪಯ್ಯನ ಹೆಂಡತಿಯೂ ವೃಥಾ ಇಬ್ಬರನ್ನೂ ಖಂಡಿಸಿ ಇದಿರು ಹಾಕಿಕೊಳ್ಳುವ ತಂಟೆಗೆ ಹೋಗಲಿಲ್ಲ.


ಠಾಕೋಠಾಕು ಮಧ್ಯರಾತ್ರಿ ಹೊತ್ತಿಗೆ ಎಚ್ಚರ ಮಾಡಿಕೊಂಡು ಸುಬ್ಬಚ್ಚಿ ಮೆಲ್ಲನೆದ್ದು ಅಡಿಗೆ ಮನೆಕಡೆಗೆ ಹೋದಳು. ಅಭ್ಯಾಸ ಬಲದಿಂದ ಕತ್ತಲಲ್ಲೇ ಉಪ್ಪಿನಕಾಯಿ ಮರಗಿ ಇಟ್ಟಿರೋ ಗೂಡಿನ ಕಡೆಗೆ ಹೋಗಲು ಅವಳಿಗೆ ಕಷ್ಟವಾಗಲಿಲ್ಲ. ಆದರೆ ಇದ್ದಕ್ಕಿದ್ದ ಹಾಗೆ ಅವಳ ಎದೆಯೊಡೆದ ಹಾಗಾಗಿ ಧೊಪ್ಪನೆ ನೆಲದ ಮೇಲೆ ಕುಕ್ಕರಿಸಿದಳು. ಅತಿ ಸನಿಹದಿಂದಲೇ ಕೇಳಿ ಬಂದ " ಪಿಚ್ ಪಿಚ್" ಶಬ್ದ ಅವಳನ್ನು ದಿಗ್ಭ್ರಾಂತಳನ್ನಾಗಿ ಮಾಡಿತು. ಹಲ್ಲಿಯ ಶಬ್ದವಂತೂ ಹಾಗಿರಲು ಸಾಧ್ಯವಿರಲಿಲ್ಲ. ಹಾಗಾದರೆ ಕಳ್ಳನೇನಾದರೂ ಇರಬಹುದೆ? ದೀಪ ಹಚ್ಚಿ ನೋಡೋಣ ಅನ್ನುವುದಕ್ಕೆ ಸುಬ್ಬಚ್ಚಿಯ ಕಾಲುಗಳು ಅವಳ ಶರೀರವನ್ನು ಹೊರುವ ಸ್ಥಿತಿಯಲ್ಲಿ ಇರಲಿಲ್ಲ. ಅಲ್ಲದೆ ದೀಪ ಹಾಕುವುದರಿಂದ ಒಂದು ವೇಳೆ ವಿನಾ ಕಾರಣ ಗಲಾಟೆಗೆ ಅವಕಾಶವಾಗಬಾರದು ಎಂದು ಇನ್ನು ಆರಿಹೋಗದಿದ್ದ ಆಂಬೋಡೆಯ ಆಸೆ ಹೇಳಿತು. ಬೆಕ್ಕು ಯಾಕೆ ಇರಬಾರದು ಎನ್ನುವ ವಿಚಾರ ಹೊಳೆಯುತ್ತಲೇ ಅವಳಲ್ಲಿ ಅಡಗಿದ್ದ ಧೈರ್ಯ ಜಾಗ್ರತ ವಾಗಿ ಸುಬ್ಬಚ್ಚಿ ಒಣಗಿದ ನಾಲಗೆಯನ್ನು ಒಮ್ಮೆ ಎಂಜಲಲ್ಲಿ ಒದ್ದೆಮಾಡಿಕೊಂಡು

ಗೊಗ್ಗರ ಧ್ವನಿಯಲ್ಲಿ " ಎ ಎ ಎ ಏಯ್ ಎಂದಳು. ಬೆಕ್ಕಿನ "ಮಿಯಾವ್ " ಎಂಬ ಉತ್ತರಕ್ಕೆ ಬದಲಾಗಿ " ಕೂಗಬೇಡ ಸುಬ್ಬಿ ನಿನಗೂ ಅರ್ಧ ಮಿಗಿಸಿದ್ದೇನೆ " ಎಂದು ಪಿಸುಗುಟ್ಟಿದರು ಪಾತಕ್ಕ ಏನೂ ಹಗರಣವಾಗಿಲ್ಲ ಎನ್ನುವಂತೆ ಶಾಂತವಾಗಿ. ಸುಬ್ಬಚ್ಚಿಗೆ ಅಶ್ಚರ್ಯವೆ ಆಶ್ಚರ್ಯ! !

"ನಾನಿಟ್ಟದ್ದು ನಿಮಗೆ ಹೇಗೆ——"

"ಹೀಗಾಗುತ್ತೆ ಅಂತ ನನಗೆ ಮೊದಲೇ ಗೊತ್ತು. ನಾನು ಎಚ್ಚರವಾಗೆ ಇದ್ದೆ. ನಂದಾದ ಮೇಲೆ ನಿನ್ನನ್ನು ಎಬ್ಬಿಸೋದು ಅಂತ ಇದ್ದೆ" ಎಂದು ಅವಳ ಮಾತಿನ ಮಧ್ಯವೇ ಉತ್ತರಿಸಿ, ಪಾತಕ್ಕ ಸುಬ್ಬಚ್ಚಿ ಕೈಗೆ ಕತ್ತಲಲ್ಲಿ ಆಂಬೋಡೆಗಳನ್ನು ತುರುಕಿದರು.

—ಎಸ್. ಕಮಲಮ್ಮ.



ನಮ್ಮುಡಗಿಗೆ ಸಂಗೀತ ಬರುತ್ತೆ. ನಮ್ದು ಕೊಂಡಿನ್ಯ ಗೋತ್ರ, ನಾಳೆ ನಿಮ್ಮುಡಗನ್ನ ಇಲ್ಲಿಗೆ ಕರೆತನ್ನಿ ನಮ್ಮುಡಿಗೀನು ಬರ್ತಾಳೆ ಸಕ್ರೆಗೆ. ನೋಡ್ಲಿ. ಒಪ್ಗೆ ಆದ್ರೆ ಬೇಗ ಲಗ್ನ ಇಡೋಣ.

ಆಮೆ ಮೊಲದ ನವ್ಯ ಕಥೆ

★

ಒಂದು ಊರಿನಲ್ಲಿ ಒಂದು ಆಮೆ ಇತ್ತಂತೆ. ಭಾರವಾದ ಅದರ ದೊಡ್ಡ ಹೊಟ್ಟೆಯನ್ನು ಹೊರುಕ್ಕೆ ನಾಲ್ಕು ಪುಟಾಣಿ ಕಾಲುಗಳಿದ್ದುವಂತೆ. ನಮ್ಮ ಮನೆ ಪುರೋಹಿತರ ತರಹಾನೆ. ಅವರ ತರಹಾನೆ ಆಮೆ ಕೂಡ ದೊಡ್ಡ ದೊಡ್ಡ ಮಾತುಗಳನ್ನು ಬಿರುಸಾಗಿಯೇ ಆಡೋದಂತೆ. ಆದರೆ ಏನು ಕೆಲಸ ಮಾಡಬೇಕಾದರೂ ಬಲು ಚಾನಸವಂತೆ. ಬೆಳಿಗ್ಗೆ ಎದ್ದು ಬಯಲಿಗೆ ಹೋಗಿ ಬರೋದರಲ್ಲಿ ಬ್ರಹ್ಮ ಕೂಡ ಹಿಂತಿರುಗಿ ಬಂದುಬಿಟ್ಟಿರುತ್ತಿದ್ದನಂತೆ. ಪಾಠ ಓದುವುದಕ್ಕೆ ಕುಳಿತುಕೊಂಡರೆ ಹಾಳೆ ತಿರುವುದಕ್ಕೆ ಒಂದು ನಿಮಿಷ ಆಗ್ತಿತ್ತಂತೆ. ಕಾಲೇಜಿನಲ್ಲಿ ಆಟೆಂಡೆನ್ಸ್ ತೆಗೆದುಕೊಳ್ಳುವುದಕ್ಕೆ ಮಾಸ್ತರು ಇವನ ಹೆಸರು ಕೂಗಿದರೆ, ಇವ ಎದ್ದು ಪ್ರೆಸೆಂಟ್ ಅನ್ನೋ ಹೊತ್ತಿನಲ್ಲಿ ಪಕ್ಕದ ಬೆಂಚಿನಲ್ಲಿ ಕೂತಿದ್ದ ಹುಡುಗಿಯರು ಒಂದು ಹುಲಿ ಕುರಿ ಆಟ ಮುಗಿಸುತ್ತಿದ್ದರಂತೆ.

ಕಾಲೇಜಿನ ಹುಡುಗ ಹುಡುಗಿಯರೆಲ್ಲಾ ಇವನನ್ನು ಅಪಹಾಸ್ಯಮಾಡಿ ನಗುತ್ತಿದ್ದರಂತೆ. ಇವನ ಬಡಾಯಿ ಬಾಯಿ ಬಲು ಬಿರುಸಾಗಿದ್ದುದರಿಂದ ಎದುರಿಗೆ ನಿಂತು ಕೀಟಲೆ ಮಾಡುವ ಧೈರ್ಯ ಹೆಚ್ಚು ಮಂದಿಗೆ ಇತ್ತಿಲ್ಲವಂತೆ. ಆದರೆ ಅದೇ ಕಾಲೇಜಿನ ಹಾಸ್ಟೆಲಿನಲ್ಲಿದ್ದ ಮೊಲ ಮಾತ್ರ ಹೆದರುತ್ತಾ ಇರಲಿಲ್ಲವಂತೆ.

"ಏನಯ್ಯಾ! ಆಮೆರಾಯ! ನೀನು ಮದುವೆಯಲ್ಲಿ ತಾಳಿ ಕಟ್ಟಿದ ಮೇಲೆ, ಮನೆಗೆ ಹೆಂಡತೀನ ಕರಕೊಂಡು ಮೆಲ್ಲಗೆ ಬರೋ ಹೊತ್ತಿಗೆ ಪಾಪ! ಆಕಿ ಮುದುಕಿ ಆಗಿಬಿಟ್ಟಿರುತ್ತಾಳಲ್ಲಯ್ಯಾ! ಮನೆಗೆ ಬಂದವಳೇ ಋಷಿಪಂಚಮಿ ವ್ರತ ಮಾಡಬೇಕಾಗುತ್ತಲ್ಲಯ್ಯಾ" ಎಂದು ಹುಡುಗಿಯರಿಗೆ ಕೇಳಿಸೋ ಹಾಗೆ, ಛುಡಾಯಿಸುತ್ತಾ ಇದ್ದನಂತೆ. "ಒದ್ದು, ನಿನ್ನ ಹಲ್ಲುಮುರಿದು ಕಿವಿಗೆ ಸಿಕ್ಕಿಸ್ತೀನಿ" ಎಂದು ಆಮೆ ರೇಗಿ ಹೊಡೆಯೋದಕ್ಕೆ ಸಿದ್ಧಮಾಡಿಕೊಳ್ಳುವ ಹೊತ್ತಿಗೆ, ಮೊಲ ನೂರಡಿ ದೂರಕ್ಕೆ ಜಿಗಿದು ಹೋಗಿ ಅಲ್ಲಿ ಕೇಕೆ ಹಾಕುತ್ತಿತ್ತಂತೆ, ಕೋಪ ಉಕ್ಕಿ ಬಂದ ಆಮೆ ಬಾಯಿತುಂಬಾ ಬೈಯ್ಯುವುದಕ್ಕೂ ಆಗುತ್ತಿತ್ತಲ್ಲವಂತೆ, ಏಕೆ ಅಂದರೆ ಹತ್ತಿರಲೇ ಹುಡುಗಿಯರು ಇದ್ದರಲ್ಲ!

ಕಾಲೇಜ್ ಡೇ ಗೋಸ್ಕರ ಆಟಪಾಟಗಳನ್ನು ಏರ್ಪಡಿಸಿದ್ದರಂತೆ. ಮೊದಲ ದಿನ ಹೆಣ್ಣುಮಕ್ಕಳ ಸ್ಪರ್ಧೆಗಳಂತೆ. ಕುಮಾರಿ ಹರಿಣಿ ಮೂರು ಪಂದ್ಯಗಳಲ್ಲಿ ಮೊದ

ಲಿಗಳಾದಾಗ, ಮೊಲ ಹೋಗಿ ಕಣ್ಣುಕಣ್ಣು ಮಿಟಕಿಸುತ್ತಾ ಅಭಿನಂದನೆಗಳನ್ನು ಸಲ್ಲಿಸಿತಂತೆ. ನಾಳೆ ಪಂದ್ಯಗಳಲ್ಲಿ ಮೂರು ನಾಲ್ಕು ಮೊದಲು ಸ್ಥಾನಗಳನ್ನು ಖಂಡಿತವಾಗಿ ಗಳಿಸುತ್ತೇನೆ. ನಾನೂ ನೀನೂ ಜೋಡಿ, ಕೆರ ಬಿಚ್ಕೊಂಡೋಡಿ ಅಂತ ಬಾಲ್ಯದಲ್ಲಿ ಹಾಡುತ್ತಿದ್ದ ಹಾಡಿನ ಪೂರ್ಣ ಅರ್ಥ ಈಗ ಆಯಿತು ನೋಡಿ, ಎಂದು ಒಂದು ರೇಕಾನೂ ಹಾಕಿತಂತೆ. ಬಿರುಗಣ್ಣಿನ ಹರಿಣಿ ತಲೆತಗ್ಗಿಸಿ, ಗರಿಕೆ ಹುಲ್ಲಿನ ಕಡ್ಡಿಯೊಂದನ್ನು ಬಾಯಲ್ಲಿ ಕಚ್ಚಿಕೊಂಡು, ಬೆರಗುಬೆರಗಾಗಿ ತನ್ನ ಗೊರಸನ್ನೇ ನೋಡುತ್ತಾ "ಏನೆಲ್ಲಾ ಚೆಂದಾಗಿ ಮಾತಾಡ್ತೀರ್ರೀ ಮಿಸ್ಟರ್ ಮೊಲ. ನಿಮ್ಮ ಕಾಲಿಗಿಂತ ನಾಲಿಗೆಯೇ ವೇಗವಾಗಿ ಓಡುತ್ತೆ ಅಲ್ಲವೇ" ಎಂದು ಹೇಳಿ ಅರಳಿದಳಂತೆ. ಹರಿಣಿ ಅರಳಿದ್ದನ್ನು ಕಂಡು "ಹಾಗಾದರೆ ನಾಡಿದ್ದು ಸಂಜೆ ಸಿನಿಮಾಕ್ಕೆ ಹೋಗೋಣ ಬರ್ತೀರಾ, ಎರಡು ಟಿಕೆಟ್ಟು ಬಿಟ್ಟಿ ಸಿಕ್ಕಿದೆ" ಎಂದು ಗಾಳ ಎಸೆಯಿತಂತೆ. ಗಾಳವನ್ನು ಹರಿಣಿ ಕಚ್ಚಿಕೊಂಡಳಂತೆ. "ಅದಕ್ಕೇನು ಮಿಸ್ಟರ್ ಮೊಲ, ಯಾವ ಪಿಕ್ಚರ್ ಹೌಸಿನಲ್ಲಿ ಟಿಕೆಟ್ ದೊರಕಿದೆ ?" ಎಂದು ಕೇಳಿದಳಂತೆ.

ಗಾಂಧಿ ಟಾಕೀಸ್‌ನಲ್ಲಿ ಮಾರಿಲಿನ್ ಮನ್ರೊ ಚಿತ್ರಕ್ಕೆ ಟಿಕೆಟ್ ದೊರಕಿದೆಃ ಪಟೇಲ್ ಪಾರ್ಕ್ ಮುಂದೆ ಹೋಗುತ್ತಲ್ಲ ನೆಹ್ರೂ ರಸ್ತೆ, ಆ ರಸ್ತೆಯಲ್ಲೇ ಆ ಟಾಕೀಸ್ ಇರೋದು. "ನಾನು ಒಂದು ಮಾತು ಹೇಳ್ತೀನಿ ಕೇಳ್ತೀರಾ" ಎಂದನಂತೆ ಮೊಲ.

ಸುಮ್ಮಗೆ ಇದ್ದಳಂತೆ ಹರಿಣಿ, ಸುಮ್ಮಗೆ ಇದ್ದರೆ ಸಮ್ಮತ ಅಲ್ಲವೇ ? "ನೋಡಿ ಹರಿಣಿ, ಡಿಯರ್, ನಾಡಿದ್ದು ಮಧ್ಯಾಹ್ನ ಮಾಸ್ತರುಗಳ ಸ್ಪರ್ಧೆ. ಎರಡು ಗಂಟೆ ಹೊತ್ತಿಗೆ ಪಟೇಲ್ ಪಾರ್ಕಿಗೆ ಹೋಗಿರ್‍ತೀನಿ, ನೀವೂ ಅದಷ್ಟು ಬೇಗ ಅಲ್ಲಿಗೆ ಬಂದು ಬಿಡಿ ಅಲ್ಲೇ ಕಾಫಿ ತಿಂಡಿ ತಿಂದು, ಸ್ವಲ್ಪಹೊತ್ತು ಆರಾಮವಾಗಿ ಹರಟೆ ಹೊಡೆಯೋಣ ತಂಪಾದ ಮೇಲೆ ಸಿನಿಮಾಕ್ಕೆ ಹೋಗೋಣ, ಏನಂತೀರಿ" ಎಂದನಂತೆ ಮೊಲ.

ಸುಮ್ಮಗೆ ಇದ್ದಳು ಹರಿಣಿ. ಕಣ್ಣುಗಳು ಮಾತ್ರ ಹ್ಞೂ ಅಂದಿತ್ತು.

ಆಟದ ಮೈದಾನದ ಪೆವಿಲಿಯನ್ ಹತ್ತಿರಲೇ ಇವರುಗಳು ಮಾತಾಡ್ತಾ ಇದ್ದಿದ್ದು. ಆ ಹೊತ್ತಿನಲ್ಲೇ ಪೆವಿಲಿಯನ್ ಒಳಗೆ ಆಮೆ ಕೈಕಾಲು ತೊಳೆದುಕೊಳ್ಳುತ್ತಾ ಇತ್ತು. ಇವರುಗಳು ಆಡಿದ ಮಾತು, ಹೂಡಿದ ಯೋಜನೆ ಎಲ್ಲಾ ಕೇಳಿಸಿತು. ಮೊಲದ ಮೇಲೆ ಸೇಡು ತೀರಿಸಿಕೊಳ್ಳುವ ಅವಕಾಶ ಸಿಕ್ಕಿತು ಎಂದು ಆಮೆ ತುಟೀನ ನಾಲಿಗೆಯಿಂದ ವರೆಸಿಕೊಂಡಿತು,

ಮೂರನೆ ದಿನ ಮಧ್ಯಾಹ್ನ ೧ ಗಂಟೆ ಸಮಯಕ್ಕೆ, ಆಮೆ ತಮ್ಮ ಪುಟ್ಟಾಮೆ ಮೊಲಕ್ಕೆ ಗಂಟುಬಿದ್ದ. ಇವತ್ತು ನಮ್ಮ ಮೆಸ್ಸಿನಲ್ಲಿ ಬಾದಾಮಿ ಹಾಲು ಮಾಡಿದ್ದಾರೆ ಕಣೋ ! ಬಲು ಮಜವಾಗಿರುತ್ತೆ. ಎರಡು ಲೋಟಾ ಕುಡಿದರೆ ಕುಮ್ಮಕ್ಕು ಬರುತ್ತೆ ಎಂದುಃ ಆಸೆ ತೋರಿಸಿದ. ಎರಡೇ ನಿಮಿಷದಲ್ಲಿ ಇಲ್ಲಿಂದ ಪಟೇಲ್ ಪಾರ್ಕಿಗೆ

ಓಡಬಹುದು. ಎಂದೂ ಯೋಚಿಸಿ, ಮೊಲ ಒಪ್ಪಿಕೊಂಡಿತಂತೆ. ಎರಡು ಲೋಟಾ ಬಾದಾಮಿ ಹಾಲು ಕುಡಿಯಿತು ಮೊಲ. "ಏನೋ ಪುಟ್ಟ್ಯಾಮೆ, ಬಾದಾಮಿ ಹಾಲಿಗೆ ಗಸಗಸೆ ಹುರಿದು ಜಡಿದ ಹಾಗಿದೆ, ಅಸಾಧ್ಯ ರುಚಿ" ಎಂದು ಆಕಳಿಸುತ್ತಾ ಮೊಲ ಹೇಳಿತಂತೆ. ಆಷ್ಟು ಆಕಳಿಸುತ್ತಾ ಇದ್ದಿ. ಸ್ವಲ್ಪ ಹೊತ್ತು ಬೇಕಾದರೆ ಇಲ್ಲೇ ಮಲಗಿರು. ಮಾಸ್ತರುಗಳ ಸ್ಪರ್ಧೆ ನೋಡದೆ ಇದ್ದರೆ ಏನು ? ಎಂದಿತಂತೆ ಪುಟ್ಟ್ಯಾಮೆ. ತೂಕಡಿಸೋ ಮೊಲಕ್ಕೆ ಹಾಸಿಗೆ ಹಾಸಿ ಕೊಟ್ಟಹಾಗೆ ಆಯಿತು. ಮಲಗಿ ಶಾಲು ಎಳೆದುಕೊಂಡಿತಂತೆ ಮೂಗಿನ ಮೇಲೆ. ಮೊಲಗಳ ಮೂಗು ಬಲು ಥಂಡಿ ಇರುತ್ತೆ ನೋಡಿ, ಅದಕ್ಕೆ. ಎರಡು ಗಂಟೆಗೆ ಅಂತ ಹೇಳಿದರೆ ಹರಿಣಿ ಬರೋದು ನಾಲ್ಕಕ್ಕೇನೆ, ಅಷ್ಟು ಹೊತ್ತಿಗೆ ಮುಂಚೆಯೇ ಇರ್ತೀನಲ್ಲಾ ಎಂದು ಮೊಲ ತನಗೆ ತಾನೇ ಸಮಾಧಾನ ಹೇಳಿಕೊಂಡಿತಂತೆ.

ಇತ್ತ ಆಮೆ ಮಧ್ಯಾಹ್ನ ಹನ್ನೆರಡಕ್ಕೇ ಪಟೇಲ್ ಪಾರ್ಕಿನತ್ತ ನಡೆಯಿತಂತೆ. ಎರಡು ಗಂಟೆ ಹೊತ್ತಿಗೆ ಪಟೇಲ್ ಪಾರ್ಕಿನ ಕಾರಂಜಿ ಬಳಿಗೆ ಹೋಯಿತಂತೆ. ಅಲ್ಲೇ ಹುಷ್ಷಪ್ಪಾ ಎಂದು ಹಣೆ ಒರೆಸಿಕೊಳ್ಳುತ್ತಾ ಕೂತಿತಂತೆ. ಹತ್ತು ನಿಮಿಷ ಆಯಿತು. ಇಪ್ಪತ್ತು ಆಯಿತು. ಅರ್ಧಗಂಟೆ ಆಯಿತು. ದೂರದ ಪೋಲೀಸ್ ಠಾಣೆಯಲ್ಲಿ 'ಮೂರು' ಬಾರಿಸಿದರು.

ಆಗ ಹರಿಣಿ ಬಂದಳು. ಒಬ್ಬಳೇ ಬಂದಿದ್ದ ಬೆದರಿದ ಹರಿಣಿ ಸುತ್ತಲೂ ನೋಡುತ್ತ ಪುಸ್ತಕ ಒಂದನ್ನು ಹಿಡಿದು ಮಾವಿನ ಮರದ ಕೆಳಗೆ ಕುಳಿತಳು. ಎರಡೆರಡು ನಿಮಿಷಕ್ಕೆ ಕೈಗಡಿಯಾರ ನೋಡಿಕೊಂಡು ಸುತ್ತಲೂ ನೋಡುವಳು. ಹಣೆ ಒರೆಸಿಕೊಂಡು ತಿರುಗಿ ಪುಸ್ತಕ ಬಿಚ್ಚುವಳು, ಹೀಗೆ ಹತ್ತು ಹದಿನೈದು ನಿಮಿಷಗಳಾಗಿರಬಹುದು. ಎದ್ದಳು ಹರಿಣಿ. ಕೆಂಪೇರಿದ್ದಳು ಹರಿಣಿ.

ಕಾರಂಜಿ ಹತ್ತಿರ ಮರೆಯಲ್ಲಿ ಕೂತಿದ್ದ ಆಮೆ ಇದೆಲ್ಲವನ್ನೂ ನೋಡುತ್ತಲೇ ಇದ್ದ. ದಡಬಡಗುಟ್ಟಿಕೊಂಡು ಹರಿಣಿ ಇದ್ದಲ್ಲಿಗೆ ನಡೆದ. ಹೊಸ ಸೂಟು ಹಾಕಿಕೊಂಡು, ಸೆಂಟ್ ಹಚ್ಚಿಕೊಂಡು ಆಮೆ ತಕ್ಕಮಟ್ಟಿಗೆ ಲಕ್ಷಣವಾಗಿ, ಹಾಗೂ ಸುವಾಸನೆಯಾಗಿಯೂ ಇದ್ದ.

"ಇದೇನು ಇಲ್ಲಿ! ಕುಮಾರಿ ಹರಿಣಿ. ಎಸ್ಸ್‌ಪ್ರೆಸ್ಸೋ ಕಾಫಿಗೆ ಹೋಗ್ತಾ ಇದ್ದೆ. ನಿಮ್ಮನ್ನು ಕಂಡೆ. ಬಂದೆ. ಏನು ಮಾಡ್ತಾ ಇದ್ದಿರಿ. ಓಹೋ ಗೊತ್ತಾಯ್ತು. ವ್ಯಾಸಂಗ ಮಾಡುಕ್ಕೆ ಇದು ಸರಿಯಾದ ಶಾಂತಿವಾತಾವರಣ ಅಂತ ಬಂದಿರಬೇಕು. ತುಂಬಾ ಹೊತ್ತು ಓದಿದ ಹಾಗಿದೆ. ಬೆವತಿದ್ದೀರಿ. ಬನ್ನಿ ನನ್ನ ಜತೆಗೆ. ಒಂದು ಬಟ್ಟಲು ಕಾಫಿ ಕುಡಿಯೋಣ" ಎಂದು ಆದರದಿಂದ ಕರೆದನಂತೆ.

ಮೊಲದ ಮೇಲೆ ಹರಿಣಿಗೆ ಕೋಪ ಬಂದಿತ್ತು. ಅವನಿಗೆ ಬುದ್ಧಿ ಕಲಿಸ್ತೀನಿ ಅಂತ ಆಮೆ ಜತೆಗೆ ಎಸ್‌ಪ್ರೆಸ್ಸೋಗೆ ಹೋದಳಂತೆ. ಅಲ್ಲಿ ಗೋಡಂಬಿ ಕುರುಕುತ್ತಾ

ಕಾಫಿ ಚಪ್ಪರಿಸುತ್ತಾ ಆಮೆ ಆಡಿದ ಅಲಂಕಾರದ ಮಾತುಗಳಿಗೆ ತಲೆದೂಗಿದಳಂತೆ. ಯಾವುದರಲ್ಲೂ ಅವಸರಪಡಬಾರದು. ಸಾವಧಾನವಾಗಿ ಆರಾಮವಾಗಿ ಮಾಡಬೇಕು. ಅದೇ ರಸಾಸ್ವಾದನೆಗೆ ಅನುಕೂಲ. ಸಂಸ್ಕೃತಿಯ ಲಕ್ಷಣ. ಎಂದೆಲ್ಲಾ ಆಮೆ ಹೇಳಿದಾಗ ಹರಿಣಿ ಕಿರಿದಾಗಿ ಬಾಯನ್ನು ಬಿರಿದಳಂತೆ.

ಆಮೆಗೆ ಉತ್ತೇಜನ ದೊರಕಿತು. ಸಿನಿಮಾಕ್ಕೆ ಹೋಗೋಣ ಅಂತಿದ್ದೆ. ನೀವೂ ಬಂದರೆ...... ಎಂದು ರಾಗ ಎಳೆದನಂತೆ.

"ಅದಕ್ಕೇನು ಬನ್ನಿ. ಹಾಸ್ಟೆಲ ಮೇಟಿಗೆ ಹೊತ್ತಾಗಬಹುದು ಅಂತ ಹೇಳಿ ಬಿಟ್ಟು ಬಂದಿದ್ದೀನಿ" ಅಂತ ಹರಿಣಿ ಹೇಳಿದಳಂತೆ.

ಇಬ್ಬರೂ ಮೆಲ್ಲಗೆ ಸಾಲು ಹೆಜ್ಜೆ ಇಡುತ್ತಾ ಸಿನಿಮಾ ಮಂದಿರವನ್ನು ಸೇರಿದರು. ಟಿಕೆಟ್ ಕೊಂಡ ಆಮೆ. ಥಿಯೇಟರ್ ಒಳಕ್ಕೆ ಇಬ್ಬರೂ ಕಾಲಿಟ್ಟರು.

*　　*　　*　　*

ಮೊಲಕ್ಕೆ ಎಚ್ಚರವಾದಾಗ ನಾಲ್ಕು ಗಂಟೆ ಆಗಿತ್ತಂತೆ. ಕೂದಲೆಲ್ಲಾ ಕೆದರಿ ಹೋಗಿತ್ತಂತೆ. ಏನೇನೋ ಕನಸುಗಳು. ಬೇಗ ಮುಖ ತೊಳೆದುಕೊಂಡು ಕ್ರಾಪ್ ಬಾಚಿಕೊಂಡು, ಕಾಡಿಗೆ ಹಚ್ಚಿಕೊಂಡು, ನಾಲ್ಕುವರೆ ಹೊತ್ತಿಗೆ ಪಟೇಲ್ ಪಾರ್ಕಿಗೆ ಓಡಿದನಂತೆ. ಪಾರ್ಕ್‌ನೆಲ್ಲಾ ಹುಡುಕಿದನಂತೆ. ಮಾವಿನ ಮರದ ಕೆಳಗೆ ಹಸೆ ಹಾಕಿ ದಂತೆ ಹುಲ್ಲು ಅದುಮಲ್ಪಟ್ಟಿದ್ದನ್ನೂ, ಅದರ ಅಳತೆಯನ್ನೂ ಕಂಡು ಇಲ್ಲೇ ಸ್ವಲ್ಪ ಹೊತ್ತು ಹರಿಣಿ ಕೂತಿದ್ದಿರಬೇಕು ಎಂದು ಊಹಿಸಿ; ಕಾಫಿ ಮಂದಿರಕ್ಕೆ ಹೋಗಿರ ಬಹುದು ಎಂದ ಯೋಚಿಸಿ, ಕಾಫಿ ಮಂದಿರಗಳನ್ನೆಲ್ಲಾ ತಲಾಷ್ ಮಾಡುಕ್ಕೆ ಶುರು ಮಾಡಿತಂತೆ. ಪಟೇಲ್ ಪಾರ್ಕಿನ ಸುತ್ತ ಕಾಫಿ ಮಂದಿರಗಳು, ಮುಸುಕಿನ ಜೋಳ ದಲ್ಲಿ ಕಾಳುಗಳು ಇದ್ದ ಹಾಗೆ ಇರೋದು ಎಲ್ಲರಿಗೂ ತಿಳಿದ ವಿಷಯ. ಅವನ್ನೆಲ್ಲಾ ಹುಡುಕಿ ಆರೂವರೆ ಆಯಿತು ಅಂತ ಸಿನಿಮಾ ಮಂದಿರದ ಕಡೆ ಸಿಳ್ಳುಹಾಕುತ್ತಾ ಓಡಿದನಂತೆ.

ಥಿಯೇಟರಿನ ಒಳಬಾಗಿಲನ್ನು ದಾಟುತ್ತಿದ್ದ ಹರಿಣಿ ಮತ್ತು ಆಮೆ ಇವರ ಬೆನ್ನುಗಳನ್ನು ನೋಡಿ, ಸೀಟಿ ಹಾಕುವುದು ನಿಲ್ಲಿಸಿ, ನಿಟ್ಟುಸಿರು ಬಿಟ್ಟು ಈ ಪಂದ್ಯ ದಲ್ಲಿ ಸೋತೆ ಎಂದುಕೊಂಡಿತಂತೆ.

ನೀತಿ :—ತಾಳಿದವ ತಾಳಿ ಕಟ್ಟ್ಯಾನು.

ಓದುಗರ ಪತ್ರ

"ಕೊರವಂಜಿ" ಸಂಪಾದಕರ ಸಮುಕ್ಷಮಕ್ಕೆ.

ಸ್ವಾಮಿ,

"ಮದುವೆಯಾದ ಮೊದಲು ವರ್ಷ ಗಂಡ ಮಾತನಾಡುತ್ತಾನೆ ಹೆಂಡತಿ ಕೇಳುತ್ತಾಳೆ. ಎರಡನೆ ವರ್ಷ ಹೆಂಡತಿ ಮಾತಾಡುತ್ತಾಳೆ, ಗಂಡ ಕೇಳುತ್ತಾನೆ. ಮೂರನೆ ವರ್ಷ ಇಬ್ಬರೂ ಮಾತಾಡುತ್ತಾರೆ. ನೆರೆಯುವರು ಕೇಳುತ್ತಾರೆ"—ಎಂಬ ನಾಣ್ಣುಡಿಯನ್ನು ನಿಜವೆಂದು ನಂಬಿದ್ದ ನಾನು ನನ್ನ ಸ್ನೇಹಿತ ಸುಬ್ಬಯ್ಯ ಗೃಹಸ್ಥನಾಗಿ ಸಂಸಾರ ಹೂಡಿದ ಮೇಲೆ, ಆ ಗಾದೆ ಹಸೀ ಸುಳ್ಳೆಂಬ ತೀರ್ಮಾನಕ್ಕೆ ಬರಬೇಕಾಯಿತು.

ಸರ್ ಸಾವಿರದೊಂಭೈನೂರ ಅರವತ್ತನೆ ಇಸವಿ ಜೂಲೈನಲ್ಲಿ ಸುಬ್ಬಯ್ಯ ಗೃಹಸ್ಥನಾಗಿ ಖಳೆ ಹೀನನಾದುದು ಸರಿಯಷ್ಟೆ. ಇದೀಗ ಸರ್ ಸಾವಿರದೊಂಭೈನೂರ ಅರವತ್ತು ನಾಲ್ಕನೇ ಮೇಯಲ್ಲಿ ಇದ್ದಕ್ಕಿದ್ದಂತೆ ಖಳೆವಂತನಾಗಿ ಹೊಳೆಯುಕ್ಕೆ ಶುರುಮಾಡಿದ್ದು ಸರಿಯಷ್ಟೆ. ಈ ಬಗ್ಗೆ ಸುಬ್ಬಯ್ಯನನ್ನು ವಿಚಾರಿಸಿದಾಗ "ಐದು ದಿನವಾಯಿತು ನನ್ನ ಹೆಂಡತಿ ಮಾತನಾಡಿ" ಎಂದ. "ಅದು ಏಕೋ ಲಕ್ವ ಗಿಕ್ವ..." ಎಂದು ನಾನೆನ್ನುವಷ್ಟರಲ್ಲೇ—"ಛೆ ಛೆ, ಹಾಗೇನೂ ಇಲ್ಲ. ನಾನೇ ತಡೆಹಾಕಿದೆ" ಎಂದ ಅವನು. ಯಾವ ಗಂಡಾನೇ ಆಗ್ಲಿ, ಹೆಂಡತಿ ಮಾತ್ನ ತಡೆಹಾಕೋಕೊ ಆಗುತ್ಯೇ, ಎಂದು ನಾನು ಹೇಳಿದರೂ ಅವನ ಮನೆಗೆ ಮೂರನೆ ದಿನ ಹೋಗಿ ಮಹಾ ಮೌನಿಯಾಗಿದ್ದ ಶ್ರೀಮತಿ ಸುಬ್ಬಯ್ಯನನ್ನು ನೋಡಿದಾಗ ನನ್ನ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಯಿತು. ಕುತೂಹಲದಿಂದ ಅವನ ಹೆಂಡತಿಯ ಮಾತಿಗೆ ಅಣೆ ಕಟ್ಟಿದ ಬಗ್ಗೆ ಅವನನ್ನು ವಿಚಾರಿಸಿದಾಗ ಅವನು ಗುಟ್ಟಾಗಿ ನನ್ನ ಬಳಿ ಹೇಳಿದ—

"ಇದರಲ್ಲಿ ಅಸಾಧ್ಯ ಬುದ್ಧಿವಂತಿಕೆ ಏನೂ ಇಲ್ಲ ವೇಣು. ಐದು ದಿನದ ಹಿಂದೆ ರಾಘವ ಬಂದಿದ್ದ. ಅವನ ಕೈಲಿ ಲೋಕ ರಾಜಕೀಯ ಮಾತನಾಡುತ್ತಾ ಇವಳಿಗೆ ಕೇಳುವಂತೆ ಜೋರಾಗಿ—"ಅವಳಿಗೂ ವಯಸ್ಸಾಯಿತು ಪಾಪ ಅದಕ್ಕೆ ಅಷ್ಟೊಂದು ಮಾತು. ಈ ತರಹ ಮಾತಾಡೋದು ವೃದ್ಧಾಪ್ಯದ ಶುರುವಿನ ಲಕ್ಷಣ ಅಂತ ಲೈಫ್‌ನಲ್ಲಿ ಬಂದಿತ್ತಲ್ಲ" ಅಂತ ಹೇಳಿದೆ: ಅದನ್ನ ಕೇಳಿದಲಾಗಾಯ್ತು ಮಾತೇ ಇಲ್ಲ ಅವಳ್ದು. ಈಗ ಹಾಯಾಗಿದ್ದೀನಿ!

ಇತಿ,

ವೇಣುಗೋಪಾಲ.

ಒಂದು ನವೀನ ಕಥೆ

(ಬಲಿತವರಿಗೆ ಮಾತ್ರ)

★

ಹಿಂದೆ—ಬಹಳ ಹಿಂದೆ—ಒಂದಾನೊಂದು ಊರಿನಲ್ಲಿ ಒಬ್ಬಾನೆ ಒಬ್ಬ ರಾಜ ಇದ್ದ. ಯಥಾಪ್ರಕಾರ ಅವನಿಗೆ ಒಬ್ಬ ರಾಣಿ, ಒಬ್ಬ ರಾಜಕುಮಾರಿ ಇದ್ದರು. ಕುಟುಂಬ ಯೋಜನೆ ರಾಜ ಚೆನ್ನಾಗಿ ತಿಳಿದಿದ್ದ.

ರಾಜಕುಮಾರಿಯೊಡನೆ ರಾಜ ವಿವಾಹದ ವಿಷಯ ಪ್ರಸ್ತಾಪಿಸಿದಾಗ, ಅವಳು ಏನು ಹೇಳಿದಳು ಗೊತ್ತೆ? ನಾನು ಹೇಳುವ ಒಂದೇ ಒಂದು ಸಾಹಸದ ಕೆಲಸವನ್ನು ಯಾರು ನಡಸಿಕೊಡುತ್ತಾರೋ ಅವರನ್ನೇ ನಾನು ಮದುವೆಯಾಗುತ್ತೇನೆ ಅಂತ.

ಅಂತೆಯೇ ಭಾವೀ ವರಗಳಿಗೆ ಸುದ್ದಿಮುಟ್ಟಿತು. ಬಂದ ಒಬ್ಬ ರಾಜಕುಮಾರ, ರಾಜಕುಮಾರಿಯ ಎದುರು ನಿಂತುಕೊಂಡು ಕತ್ತಿ ವರೆಯಿಂದ ಎಳೆದು ಬಲಗೈಲಿ ಹಿಡಿದು,ಎಡಗೈ ಮೇಲಕ್ಕೂ ಕೆಳಕ್ಕೂ ಆಡಿಸ್ತಾ (ನಮ್ಮ ಪ್ರಿಯ ಸಿನಿಮಾ ನಟ ಸರಸಿಂಹ ರಾಜು ಸದಾರಮೆ ಚಿತ್ರದಲ್ಲಿದ್ದ ಹಾಗೆ) "ಹೇಳು ರಾಜಕುಮಾರಿ, ಹೇಳು ಏನು ಮಾಡಲಿ ಬೇಗ ಹೇಳು, ಏಳು ಸಮುದ್ರವನ್ನು ಹಾರಿಬಿಡಲೇ, ಎಂಟು ಪರ್ವತವನ್ನು ನುಂಗಿಬಿಡಲೇ, ಇಲ್ಲ ಬೆಂಕಿ ಒಳಗೆ ನುಗ್ಗಿ ಸಿಂಹದ ಮರಿಯುನ್ನು ಕಂಕುಳಲ್ಲಿಟ್ಟುಕೊಂಡು ಬರಲೇ. ಹೇಳು ಹೇಳು" ಎಂದು ಬೊಬ್ಬರಿಸಿದ.

"ಬೋ ರಾಜಕುಮಾರ, ಹಾಗೇನೂ ಮಾಡದಿರು. ಈ ಹ್ಯಾಂಡ್ ಬ್ಯಾಗ್ ತೆಗೆದುಕೋ. ಒಂದೇ ಒಂದು ಕಿಲೋ ಸಕ್ಕರೆ ಇನ್ನೊಂದು ಗಂಟೆಯೊಳಗೆ ತೊಗೊಂಡು ಬಾ. ಇದೇ ನನ್ನ ಸವಾಲು" ಅಂತ ಬ್ಯಾಗ್ ಕೊಟ್ಟೇಬಿಡೋಣವೇ!!

ಪಾಪ! ಆ ರಾಜಕುಮಾರ ಸಕ್ಕರೆ ಚೀಲ ಹಿಡ್ಕೊಂಡು ಹೋದವನು ವಾಪಸ್ ಬರಲೇ ಇಲ್ವಂತೆ.

ಎಷ್ಟೋ ದಿನಗಳಾದ ಮೇಲೆ ಇನ್ನೊಬ್ಬ ಕಿರೀಟ ಧರಿಸದೇ, ಕತ್ತಿ ಇಲ್ಲದೇ, ಕೈಯ್ಯಲ್ಲಿ ಚೀಲ ಹಿಡ್ಕೊಂಡೆ, ಟೋಪಿ ಹಾಕ್ಕೊಂಡು ಸೀದಾ ಬಂದಾ ರಾಜಕುಮಾರಿ ಹತ್ರಕ್ಕೆ.

"ನಿನ್ನ ಪ್ರಶ್ನೆ ಏನು ಹೇಳು? ನಾನು ನಿನ್ನನ್ನು ಮದುವೆಯಾಗುತ್ತೀನಿ" ಅಂದ,

"ಎಂತೆಂತಹ ರಾಜಕುಮಾರರೇ ಹಿಂತಿರುಗಿ ಬರಲಿಲ್ಲ. ನೀನು ಈ ಕೆಲಸಕ್ಕೆ ಕೈ ಹಾಕಬೇಡ, ಹಿತ್ತಿಲ ಬಾಗಿಲಿಂದ ಓಡಿಹೋಗು" ಅಂತ ರಾಜಕುಮಾರಿ ಹೇಳಿದಳು.

"ನನಗೆ ಚೆನ್ನಾಗಿ ಅಭ್ಯಾಸ ಇದೆ. ದಿನಾ ಸಂಜೆ ಸೊಸೈಟಿ ಬಾಗಿಲ್ಹಾಕಿ ಹಿತ್ತಿಲ ಬಾಗಿಲಿಂದಲೇ ಓಡಿಹೋಗ್ತೀನಿ. ಬೇರೆ ಕೆಲಸ ಹೇಳು" ಎಂದ ತನ್ನ ಟೋಪಿ ಸರಿಮಾಡಿ ಕೊಳ್ತಾ!

"ನನ್ನನ್ನು ನೀನು ಮದುವೆ ಆಗಬೇಕಾದರೆ. ಒಂದು ಕಿಲೋ ಸಕ್ಕರೆ ಇನ್ನೊಂದು ಗಂಟೆಯಲ್ಲೇ ತೊಗೊಂಡು ಬಾ" ಅಂತ ರೀವಿಯಿಂದ ತನ್ನ ಒಂದು ಕಾಲನ್ನು ಕುರ್ಚಿ ಮೇಲಿಟ್ಟು, ತನ್ನ ಜಡೇನ ಬಲಗೈಯ್ಯಲ್ಲಿ ತಿರುಗಿಸ್ತಾ, ಕತ್ತು ಕೊಂಕಿಸುತ್ತಾ ಹೇಳಿದಳು.

"ಓಹೋ, ಅಷ್ಟೇ ತಾನೇ" ಅಂತ ಅವರ ಮನೆ ಅಡಿಗೆ ಮನೆಗೇ ನುಗ್ಗಿ ಒಂದು ಕಿಲೋ ಸಕ್ಕರೆ ತಂದೇ ಬಿಟ್ಟ, ತನ್ನ ಸೊಸೈಟೀಗೆ ಬರದೇ ಇದ್ದ ಮಾಲು ಇನ್ನೆಲ್ಲಿರುತ್ತೆ ಅಂತ ಗೊತ್ತಿತ್ತು!

ರಾಜಕುಮಾರಿ ಕಮ್ ಕಿಮ್ ಅನ್ನದೇ ಮಾಲೇ ಹಾಕೇಬಿಟ್ಳು ಅವನಿಗೆ.

—ಹಾ. ಮ್ಯ. ಸೂರಿ.



" ಅಯ್ಯೋ ಟೋಕಿಯೋಲಿ ಕೊಟ್ಟಿದ್ ಮೆಡ್ಲೆಲ್ಲ 14 ಕ್ಯಾರೆಟ್‌ಪ್ಪ
ನಾವೇ ಬುದ್ಧಿವಂತ್ರು ನಮ್ಗೆ ಬರ್ಲಿಲ್ಲ."

ನಿರ್ಮಲಳ ನೈರ್ಮಲ್ಯ ದಿನಾಚರಣೆ

★

ಸಿರಿಮುಡಿ ಸಿಂಗರಿಸಿಕೊಂಡು, ಮಲ್ಲಿಗೆ ದಂಡೆ ಮುಡಿದು, ನೂರು ರೂಪಾಯಿನ 'ಪಾಟ್' ಕಲರ್ ಸೀರೆ ಉಟ್ಟು, 'ಪೋಗಿ' ಸ್ಲೀವ್ಸ್ ಜಾಕೆಟ್ಟು ತೊಟ್ಟು, ತುಟಿಗೆ ಲಿಪ್‌ಸ್ಟಿಕ್, 'ಸಲೀಮ್ ಷಾಹಿ' ಜರಿ ಚಡಾವು. ಸೀರೆಗೆ ಒಪ್ಪುವ ವ್ಯಾನಿಟಿ ಬ್ಯಾಗು ಹಿಡಿದು, ಬೀದಿ ಬಾಗಿಲಿಗೆ ಬಂದ ಬಿಂಕದ ಸಿಂಗಾರಿ ನಿರ್ಮಲಳನ್ನು ನೋಡಿ ರಾಯರು ಅವಾಕ್ಕಾಗಿ, ಗಂಟಲು ಹಿಡಿದಂತಾದರೂ, ಧೈರ್ಯಮಾಡಿ ಮನದನ್ನೆಯನ್ನು ಕೇಳೇ ಬಿಟ್ಟರು.

"ಏನು ನಿಮ್ಮಿ! ಎಲ್ಲಿಗೆ ಈ ಮುಸ್ತಾಬು? Fashion parade compete ಮಾಡೊಕ್ಕೆ ಹೊರಟೆಯಾ?"

"ಅಪಶಕುನದ ಈ ಪ್ರಶ್ನೆ ಹಾಕ್ಬೇಡಿ ಅಂತ ನೂರು ಸಲ ಬಡ್ಕೊಂಡ್ರೂ, ನೀವೆಲ್ಲಿ ಬಿಡ್ತೀರಿ, ನಿಮ್ ಹುಟ್ಗುಣ."

"ಹೆ...ಹೆ...ಹೆ...ಅಲ್ಲಾ, ಸಿನಿಮಾ ಟೈಂ ಆಗೋಗಿದೆ...ಮತ್ತೆ ಕ್ಲಬ್ಬಿನ ಟೈಂ ಇನ್ನೂ ಆಗಿಲ್ಲಾ..."

"ಲಕ್ಷಣವಾಯ್ತು. ಇವತ್ತು ಅಕ್ಟೋಬರ್ ಎರಡನೇ ತಾರೀಖಲ್ವೇ? ನಗರ ದಲ್ಲಿ ಎಲ್ಲೆಲ್ಲೂ ನೈರ್ಮಲ್ಯ ದಿನಾಚರಣೆ ಆರಂಭವಾಗಿದೆ. ಪೇಪರ್ ಓದಿಲ್ವೇ? ಇವತ್ತು ನಮ್ಮ ಸಮಾಜದ ಕಾರ್ಯಕಾರಿ ಸಮಿತಿಯ ಸದಸ್ಯೆಯರೆಲ್ಲರೂ ನಗರದ Slum area, ಆಸ್ಪತ್ರೆ ಭೇಟಿ, ಕೆಲವು ಸಾರ್ವಜನಿಕ ಸಂಸ್ಥೆಗಳಿಗೆ ಭೇಟಿ ಮಾಡಿ, ತಮ್ಮ ಸುತ್ತಮುತ್ತಲೂ ಚೊಕ್ಕಟವಾಗಿ ಹೇಗೆ ಇಟ್ಕೋಬೇಕು ಅಂತ ಬೋಧಿಸಿ ಬರ್ತೀವಿ. ಇನ್ನೇನು ಕಾರ್ಯದರ್ಶಿ ಕಾರು ಈಗ ಬಂದ್ಬಿಡುತ್ತೆ."

"ಓ...ಹಾಗಾ?...ಸರಿ...ಸರಿ...ಹೋಗ್ಬಿಟ್ಟು ಬಾ...ನಿನ್ಹೆಸರು...ಆದೇ... ನಿರ್ಮಲಾಂತ...ಸಾರ್ಥಕವಾಯ್ತು."

"ಸಾಕ್ರಿ ಹಾಸ್ಯ...ಅಲ್ರೀ? ಈ ಪಕ್ಕದ ಮೋರಿ ಇಂದ...ಅದೇನು ಗಬ್ಬು ವಾಸನೆ...ಮೂಗಿಗೆ...ಬಡಿತಾ ಇದೆ...ಇಷ್..."

"ಓ...ಅದಾ...ಗುಡಿಸುವವಳು ಬಂದು ಒಂದು ವಾರವಾಗ್ತಾ ಬಂತು...ಪಾಪ! ವಿಚಾರಿಸ್ಕೋಕ್ಕೆ ನಿನಗೆಲ್ಲಿ ಪುರುಸೊತ್ತು?...ಹೊರಡು...ಹೊತ್ತಾಯ್ತು ..."

“ಎಲ್ಲಿಗೆ ಹೋಗ್ತಿ ಮಮ್ಮಿ ?” ಅಂತ ಕೇಳ್ತಾ ಬಂದು ನಿಂತ ಕೊಳಕು ಕಮಲಿ ಮೇಲೆ ಬಿತ್ತು ಅಪ್ಪಾವ್ರ ವಕ್ರದೃಷ್ಟಿ.

“ಇದೇನೆ ಕಮ್ಲಿ ? ನಿನ್ನ ಬಟ್ಟೆ ಎಷ್ಟು ಕೊಳಕಾಗಿದೆ. ನಾಚಿಕೆ ಆಗಲ್ವೇ ಈ ಕೊಳಕು ಬಟ್ಟೆ ಹಾಕ್ಕೊಳ್ಳೋಕ್ಕೆ ? ನಿಮ್ಮಜ್ಜಿ...ಬಟ್ಟೆ ಒಗೆಯೊಕ್ಕೆ ಸೋಪು ಕೊಡ್ತಾರೋ ಇಲ್ವೋ ? ಅಥವಾ ಕೊಟ್ಟ ಸೋಪೆಲ್ಲಾ ಲಿಂಗಿ ಪಾಲಾಗುತ್ತೋ ಏನೊ ?”

“ಇಲ್ಲಮ್ಮಾ...ಮನೇಲಿ ಸೋಪು ಮುಗಿದು ಹೋಗಿದೆ ಅಂತ ಅಣ್ಣ ಹತ್ರ ಹೇಳಿದ್ಲು ಲಿಂಗಿ” ಅಂತ ಮುದ್ದಾಗಿ ಹೇಳ್ತು ಮಗು.

“ನಿಮ್ಮಪ್ಪ ಹತ್ರ ಹೇಳ್ದ್ರೆ ನಂಗೆ ಹೇಗೆ ಗೊತ್ತಾಗ್ಬೇಕು ? ಯಾರಾದ್ರೂ ಈಗ ನಮ್ಮನೇಗೆ ಬಂದು, ನಿನ್ ಬಟ್ಟೆ, ನಿಮ್ಮಪ್ಪನ್ ಮಡ್ಡಿ ಪಂಚೆ ನೋಡಿದ್ರೆ ನಂಗೆ ಅವಮಾನ.”

“ಪಾಪ ! ಮಗು ಮೇಲೆ ಯಾಕೆ ರೇಗಿ ಬೀಳ್ತೀ ? ನೀನು ಮನೇಲಿದ್ರಲ್ವೇ ಯಾವ ಸಮಾಚಾರಾನೂ ತಿಳಿಯೋದು.”

“ಮುಖ್ಯ ನಾನು ಹೊರಗೆ ಹೋಗಿ ಸಮಾಜ ಸೇವೆ ಮಾಡೋದು ಎಲ್ರಿಗೂ ಕಣ್ಣುರಿ” ಎಂದು ಕೆರಳಿತು ಫಣಿ.

“ಎಲ್ಲಿಗೆ ಹೊರಟ್ಯೇ ಈ ರಣ ರಣ ಬಿಸಲ್ನಲ್ಲಿ ಓ...ನಿನ್ ಸೀರೆ ನೋಡಿದ್ರೆ ಗೊತ್ತಾಯ್ತು. ಮದುವೆ ಮನೇಗೇನೇ ?” ಅಂತ ಅತ್ತೆಮ್ಮನವರು ಅಡಿಗೆ ಮನೆಯಿಂದ ಅವತರಿಸಿ ಅವಲಕ್ಷಣವಾಗಿ ಪ್ರಶ್ನೆ ಹಾಕಿ ಸೊಸೆ ಕೋಪಾನ ಕೆರಳಿಸೇಬಿಡೋದೆ ?

“ಮದುವೆ ಮನೇನೂ ಅಲ್ಲಾ, ಏನೂ ಇಲ್ಲಾ. ಇವತ್ತಿನಿಂದ ಒಂದು ವಾರ ನಗರದಲ್ಲಿ ನೈರ್ಮಲ್ಯ ದಿನಾಚರಣೆ ನಡೆಯುತ್ತೆ. ಅದಕ್ಕೆ ನಾವು ಇವತ್ತು (ಜಂಭ ದಿಂದ) ಎಲ್ಲಾ ಕಡೆ ಹೋಗಿ ಶುಚಿಯಾಗಿ ಶುಭ್ರವಾಗಿ ನಮ್ಮ ಸುತ್ತಮುತ್ತಲಿನ ಪ್ರದೇಶ ಹೇಗೆ ಇಟ್ಟುಕೊಳ್ಳುವುದು ಅಂತ ಹೇಳ್ಕೊಟ್ಟು ಬರ್ತೀವಿ. (ಬೊಚ್ಚು ಬಾಯಿ ಬಿಟ್ಟು ಕೆಟ್ಟದಾಗಿ ನಕ್ಕು) ಚೆನ್ನಾಯ್ತು. ಅಲ್ಲಿ ಇಲ್ಲಿ ಹೋಗಿ ಭೋದಿಸೋದ. ಬಿಟ್ಟು, “ಬಾಯಲ್ಲಿ ಹೇಳೋದು ಕೈಯಲ್ಲಿ ಮಾಡು ಅಂತ” ಗಾದೆ ಹೇಳೋ ಹಾಗೆ ನಿನ್ನ ಸ್ನೇಹಿತರನ್ನೆಲ್ಲಾ ನಮ್ಮ ಮನೆ ನಿರ್ಮಲೀಕರಣಕ್ಕೆ ಯಾಕೆ ಬಿಡಬಾರದು ಅಂತೀನಿ. ಮೋರಿ ಕೊಳೆತು ನಾರ್ತಾ ಇದೆ. ಮೊಂಡು ಪರಕೆ ಬೇಕಾದ್ರೆ ಮೂರು ನಾಲ್ಕು ಇವೆ ಕೊಡ್ತೀನಿ. ಹಾಳಾದ್ದು ವಾಯುನೋವು ಬಂದು ಸೊಂಟ ಹಿಡ್ಕೊಂಡಿದೆ ಏಳಕ್ಕಾಗಲ್ಲ. ಬಗ್ಗಕ್ಕಾಗೊಲ್ಲ. ನಮ್ಮ ಮನೆ ಉಗ್ರಾಣ ಒಂದು ವಾರದಿಂದ ಪೊರಕೇನೇ ಕಂಡಿಲ್ಲ. ನನ್ಕೈಲಿ ಆದ್ರೆ ನಾನೇ ಮಾಡ್ಬಿಡ್ತಿದ್ದೆ. ಈ ಒಂದು ವಾರ ಆದ

ಮೇಲೆ ನಗರದಲ್ಲಿ ಎಲ್ಲೀ ಕೊಳಕು ಅಲ್ಲೀ ಬಿದ್ದಿರತ್ತೆ" ಘೋಚಿನ್ನಾಗಿದೆ ನಿಮ್ಮ ನಿರ್ಮಲೀಕರಣ !

(ಕೋಪದಿಂದ ಉರಿದು ಬಿದ್ದು) ಸಾಕು ನಿಲ್ಸಿ ನಿಮ್ಮ ವ್ಯಾಖ್ಯಾನ. ಮನೆ ಬಿಟ್ಟು ಹೊರಡುವುದಕ್ಕಿಲ್ಲ. ಒಬ್ಬೊಬ್ಬರದು ಒಂದೊಂದು ಗೋಳು...ಆಗೋ ಕಾರು ಹಾರನ್ ಆಗ್ತಿದೆ...ನಾನಿನ್‌ಬರ್‍ತೀನಿ.

* * * *

ಸಾಕಪ್ಪಾ ಸಾಕು ಈ ನಿರ್ಮಲೀಕರಣ. ಥೂ ! ಮುಂಚೇನೆ ಗೊತ್ತಿದ್ರೆ ಒಂದು ಗೂಬೆ ಮುಖದ ಸೀರೆ ಉಟ್ಕೊಂಡು ಹೋಗ್ತಿದ್ದೆ. ಅನ್ಯಾಯ ! ಎಂತಾ ಸೀರೆ ಹಾಳಾಯ್ತು,"

" ಏನು ! ನಿರ್ಮಲಾದೇವಿಯವರು ನಗರ ನೈರ್ಮಲ್ಯ ದಿನಾಚರಣೆ ಸೊಗಸಾಗಿ ಮಾಡಿದ ಹಾಗೆ ಕಾಣುತ್ತೆ. ಊರಿನ ಕೊಳಕೆಲ್ಲಾ ಮೆತ್ಕೊಂಡು ಬಂದಿದಿಯಲ್ಲೆ ? ಇದೇನು ಸೀರೆ ತುಂಬಾ ಕರೀ ಸ್ಟಾರ್ಸ್ಸ್ ?

" ಅಯ್ಯೋ ! ಅದೇನ್ಹೇಳ್ತೀರಿ ಆ ಕಥೆ ! ಅಲ್ಲಾ ಸುಮ್ನೆ ಹೋಗಿ ಅವರಿಗೆಲ್ಲಾ ಹೇಳಿ ಕೊಳಕು ತೆಗ್ಸೋದು ಅಂತ ಅಂದ್ಕೊಂಡಿದ್ರೆ, ಆ Slum area ಗೆ ಹೋದ ತಕ್ಷಣವೇ ಒಬ್ಬೊಬ್ರ ಕೈಲೂ ಒಂದೊಂದು ಮೋಟು ಪೊರಕೆ ಕೊಟ್ಟು ಮೋರಿ ಸಾಫ್ ಮಾಡಿ ಅಂತ ಹೇಳೇಬಿಡೋದೆ ಕಾರ್ಯದರ್ಶಿ !

ರಾಮ !ರಾಮ ! ಆ ಮೋರೀನೋ ಇಪ್ಪತ್ತು ಮೂವತ್ತು ಗುಡಿಸಲರವರ ಮನೆಯಿಂದ ಹರಿದು ಬಂದ 'ಗಂಗಾವಾಹಿನಿ.' ಬೇಗ ಗುಡ್ಸಿ ಮುಗಿಸ್ಬಿಡೋಣಾಂತ ಸೀರೆ ಮೇಲೆ ಸಿಗ್ಸೋದು ಮರ್‍ತು 'ರಪ್' ಅಂತ ಪೊರ್ಕೆ ಹಾಕ್ದೆ...ಮುಖ, ಮೈ, ಸೀರೆ ಮೇಲೆಲ್ಲಾ ಸಿಡಿದುಹೋಯ್ತು ಕೊಚ್ಚೆ ನೀರು. ಛೀ ! ಇನ್ನೆಂದೆಂದ್ಗೂ ಹೋಗೊಲ್ಲಾ ಈ ಕೆಲ್ಸಕ್ಕೆ.

" ಬಿಡು...Evening in paris ಸುಗಂಧ ಲೇಪನ ಖರ್ಚಿಲ್ದೆ ಆಯ್ತು... ಅದಿರ್‍ಲಿ ಈ ಅವತಾರ ಯಾವಾಗ ಆಯ್ತು...ಆರಂಭ ಶೂರತ್ವ..."

" ಮೊದ್ಲೆ ಆಗಿದ್ರೆ ನೆಪಸಿಕ್ತು ಅಂತ ಕಾರು ಹತ್ತಿ ಬಂದ್ಬಿಡ್ತಿದ್ದೆ. ನಮ್ಮ ಸೇವೆಗೆ ಪ್ರತಿಫಲ ಅನ್ನೋ ಹಾಗೆ ಕೊನೇಲಿ ಆಯ್ತು."

" ಹಾಗಾದ್ರೆ ಮಹಿಳೆಯರ ಧಾಳಿ ಮೊದಲು ಎಲ್ಲಾಯ್ತು ? "

" ಗುಟ್ಟಾಪುರದ ಆಸ್ಪತ್ರೆ ಭೇಟಿ ಮಾಡಿದೆವು. ಅಲ್ಲಿ ಹೋದ್ರೆ...ದೇವರಿಗೇ ಪ್ರೀತಿ. ರೋಗಿಗಳು ತಿಂದು ಬಿಸಾಕಿದ ಬ್ರೆಡ್ಡು ಚೂರು ಚೆಲ್ಲಾಪಿಲ್ಲಿಯಾಗಿತ್ತು. ಇರುವೆ...ನೊಣಗಳ ಬೀಡು. ಅವರ ಹಾಸಿಗೆ...ಬಟ್ಟೆ...ಅಗಸರ ಮನೆ ಕಂಡು

ಎಷ್ಟು ತಿಂಗಳಾಗಿದೆಯೋ? ಅಲ್ಲಿಂದ ನವಭಾರತ ಆಸ್ಪತ್ರೆಗೆ ಬಂದ್ವು—duty timeನಲ್ಲಿ ಲೇಡಿ ಡಾಕ್ಟ್ರು ನಾಪತ್ತೆ! ಅಲ್ಲಾ...ಹೆರಿಗೆ ಆಸ್ಪತ್ರೆ ಕಂಣ್ರಿ..."ಡಾಕ್ಟರ್ ಎಲ್ಲಿ?" ಅಂತ ನರ್ಸ್‌ನ ಕೇಳ್ದ್ರೆ..."ಮನೆಗೆ ಹೋಗಿದಾರೆ" ಅಂದ್ಳು ಆ ಬಿನ್ನಾಣಗಿತ್ತಿ. ನಿಜ ಇರ್ರೋದು ಅಂತ ಹಾಗೇ ವಾರ್ಡುಗಳೆಲ್ಲಾ ನೋಡಿಕೊಂಡು ಬಂದು ಕೊನೇಲಿ ಲೇಬರ್ ವಾರ್ಡ್ ಚೊಕ್ಕಟವಾಗಿದೆಯೋ ಇಲ್ವೋ ಅಂತ ನೋಡೊಕ್ಕೆ ಹೋದ್ವು. ಹೇಗೂ ಡಾಕ್ಟರಿಲ್ಲದ ಮೇಲೆ...ಯಾವುದೂ ಕೇಸಿಲ್ಲಾಂತ ನುಗ್ಗಿದೆವು. "ಅಯ್ಯೋ! ಯಾರೋ ಪೇಷಂಟ್ ಟೇಬಲ್ ಮೇಲೆ ಮಲಗಿದಾಳೆ...ಡಾಕ್ಟ್ರು ಬೇರೆ ಇಲ್ಲಾ ಪಾಪ! ಅಂತ ಓಡೋಗಿ ನರ್ಸ್‌ನ ಕರ್ಕೊಂಡು ಬಂದೆ.

"ಎಲ್ಲಿ? ಎಲ್ಲಿ ಪೇಷಂಟು? ಅಂತ ರೂಮಿನೊಳಗೆ ಬಂದ್ಳು. ಇವ್ರಾ?... ಇವ್ರು..."

ಈ ಗಲಾಟೆ ಕೇಳಿ ಪೇಷಂಟಿಗೆ ತಟಕ್ಕನೆ ಎಚ್ಚರವಾಗಿ "nonsense...ಏನಿದು ಗಲಾಟೆ? ಯಾರನ್ನಾದ್ರೂ ಪೇಷಂಟ್ನ ಕರ್ಕೊಂಡು ಬಂದಿದೀರಾ ಅಂತ ಮೈ ಕೈ ಮುರಿತಾ ಆಸ್ಪತ್ರೆ ಲೇಡಿ ಡಾಕ್ಟರು ನಿದ್ದೆಹೊಡೆದು ಟೇಬಲ್ಲಿಂದ ಇಳೀತಾಳಲ್ರಿ!"

"ನಾವೇನೂ ಯಾರನ್ನೂ ಹೆರಿಗೆಗೆ ಕರ್ಕೊಂಡು ಬಂದಿಲ್ಲ. ನಾವು ಸರಕಾರದ ಕಡೆಯಿಂದ ಬಂದ visitors ಉ. ನಿಮ್ಮ ಬೇಜವಾಬ್ದಾರೀನ ತಿಳಿಸಿ, ಈಗಿಂದೀಗ್ಲೇ ನಿಮ್ಮ ಮೇಲಿನ ಆಧಿಕಾರಿಗೆ ತಿಳಸ್ತೀವಿ" ಅಂದ್ವು, ಇಂಗು ತಿಂದ ಮಂಗನಂತಾಗಿತ್ತು ಆಕೆ ಮುಖ. "ಇಷ್ಟು ಸಾಲ್ದು ಅಂತ ರೋಗಿಗಳಿಗೆ ಕೊಡೋ ಔಷಧಿಗಳೆಲ್ಲಾ Black marketನಲ್ಲಿ ಮಾರ್ತ್ತಾಳೆ ಅಂತ ವರದಿ. ಹಾಲು, ಬ್ರೆಡ್ಡು ರೋಗಿಗಳಿಗೆ ಕೊಡದೆ, ನರ್ಸು, ವಾರ್ಡ್ ಬಾಯ್ಸು ತಿಂದು ಗುಟುರು ಗೂಳಿಗಳ ಹಾಗಿದ್ದಾರೆ. ರೋಗಿಗಳಿಗೆ ಬೇರೆ ನರಕವೇ ಬೇಡ."

"ಹುಂ...ಆ ತರಹ ನರಕ ಕೂಪದಲ್ಲಿ ನಾವು ಇದ್ದೀವಲ್ಲಾ. ಇವತ್ತು ನಿಮ್ಮ ಸಮಾಜದವರು ನಿನ್ನ ಕಣ್ಣು ತೆರೆಸಿದರು. ಮೊದಲು ನಮ್ಮ ಮನೆ ನಿರ್ಮೂಲೀಕರಣ ಮಾಡು ನಿಮ್ಮ..."

—ಸುನೀತಿ ಕೃಷ್ಣಸ್ವಾಮಿ.

★ ಪ್ಯಾರಿಸ್ಸಿನಲ್ಲಿ ಮೊದಲ ರಾತ್ರಿ ★

★

ಅಮೆರಿಕಾದ ಲಕ್ಷಾಧೀಶ್ವರರು ಮಜ ಮಾಡಬೇಕಾದರೆ ಏನು ಮಾಡ್ತಾರೆ? ಪ್ಯಾರಿಸ್ಸಿಗೆ ಓಡಿ ನೈಟ್ ಕ್ಲಬ್‌ಗೆ ಯಾತ್ರೆ ಹೋಗ್ತಾರೆ.

ಇಂಗ್ಲೆಂಡಿನ ಶ್ರೀಮಂತರು ಮಸ್ತ್ ಬಂದಾಗ ಎಲ್ಲಿಗೆ ಹೋಗ್ತಾರೆ? ವ್ಯಾಪಾರದ ನೆಪ ಹೇಳಿಕೊಂಡು ಪ್ಯಾರಿಸ್ಸಿಗೆ ಹೋಗ್ತಾರೆ.

ಭಾರತದ ರಾಜ ಮಹಾರಾಜರುಗಳು ಬೇಸರ ಕಳೆದುಕೊಳ್ಳಲು ಎಲ್ಲಿಗೆ ಹೋಗ್ತಾರೆ? ಕಾಡಿಗೆ ಹೋಗಿ ಷಿಕಾರಿ ಮಾಡ್ತಾರೆ, ಅಥವಾ ಪ್ಯಾರಿಸ್ಸಿಗೆ ಹೋಗಿ ಷಿಕಾರಿ ಹೂಡ್ತಾರೆ.

೧೩–೧೪ ವಯಸ್ಸಾಗಿದ್ದಾಗ ಹೈಸ್ಕೂಲಿನ ಮಾಸ್ತರೊಬ್ಬರು ಇದನ್ನು ಬಲು ರಸವತ್ತಾಗಿ ವರ್ಣಿಸಿ, ತುಸು ಜೊಲ್ಲು ಸುರಿಸುತ್ತಿದ್ದರು.

ಹೈ ಸ್ಕೂಲಿನ ಮಾಸ್ತರು ಹೇಳಿದುದು ಮೇಲೆ ಮೇಲೆ ಒತ್ತಿಕೊಂಡು ನೆನಪಿಗೆ ಬಂತು, ನಾನು ಪ್ಯಾರಿಸ್ಸಿನಲ್ಲಿ ಇಳಿದಾಗ. ಅತ್ತೆ ಮನೆಗೆ ಅಳಿಯ ಹೋದರೆ, ಮಾನವಾಗಿರಬೇಕಾದರೆ ಮೂರು ದಿನ ಮಾತ್ರ ಅಂತ ನಮ್ಮ ರಂಗಜ್ಜಿ ಹೇಳಿದ್ದೂ ಜ್ಞಾಪಕಕ್ಕೆ ಬಂತು. ಯಾಕೋ ಕಾಣೆ. ಪ್ರಾಯಶಃ ಪ್ಯಾರಿಸ್ಸಿನಲ್ಲಿ ಮೂರು ದಿನದ ಪ್ರವಾಸ ಅಂತ ಏರ್ಪಾಡಾಗಿದ್ದ ಕಾರಣ ಇರಬಹುದು.

ಅಂತೂ ದಿನವೆಲ್ಲಾ ಒಂದೇ ಯೋಚನೆ. ರಾತ್ರಿ ಯಾವ ನೈಟ್ ಕ್ಲಬ್ಬಿಗೆ ಹೋಗೋದು? ಆದಷ್ಟು ಕಡಿಮೆ ಖರ್ಚಿನಲ್ಲಿ ನಿಶಿಯಾತ್ರೇನ ಮುಗಿಸೋದು ಹೇಗೆ? ಇಳಿದುಕೊಂಡಿದ್ದ ಹೋಟಲ್ ಮಾಲೀಕನನ್ನೇ ಸಲಹೆ ಕೇಳಿದೆವು. ಆತ ನಮ್ಮ ಮುಪ್ಪಿನ ವಯಸ್ಸು, ಬಟ್ಟ ತಲೆ, ನೆರಿ ನೆರಿ ಮುಖಗಳನ್ನು ಸಾವಧಾನವಾಗಿ ನೋಡಿದ. ಮೂರು ರಾತ್ರಿ ಕಳೆಯಬೇಕು ಎಂದಿದ್ದೀರಿ. ಅದರ ಬದಲು ಒಂದೇ ರಾತ್ರಿಯನ್ನು ಒಂದು ನೈಟ್ ಕ್ಲಬ್ಬಿನಲ್ಲಿ ಕಳೆಯಿರಿ, ಮಿಕ್ಕ ಎರಡು ರಾತ್ರಿ ಬೇಗ ಹೋಟಲಿಗೆ ಬಂದು ರಾಮಸ್ಕಂಧಂ ಹನೂಮಂತಂ ಹೇಳಿಕೊಂಡು ತೆಪ್ಪಗೆ ಬಿದ್ದುಕೊಳ್ಳಿ. ಹಾಗೆ ಮಾಡಿದರೆ ಖರ್ಚುಮಾಡುಕ್ಕೆ ಹೆಚ್ಚು ಹಣವೂ ಇರುತ್ತೆ. ಹಾಗೂ ಸುಪ್ರಸಿದ್ಧ

ಲೀಡೋವಿಗೂ ಹೋಗಬಹುದು ಎಂದು ಸಲಹೆ ಕೊಟ್ಟ. ಆದರೆ ಲೀಡೋಕ್ಕೆ ಹೋಗಬೇಕಾದರೆ ಮೊದಲೇ ನಿಮ್ಮ ಸ್ಥಾನಗಳನ್ನು ಕಾದಿರಿಸಿಕೊಂಡಿರಬೇಕು. ಈ ಹೋಟಲಿಗೆ ನಾಲ್ಕು ಸ್ಥಾನ ಮೀಸಲು. ಅವೆಲ್ಲವನ್ನೂ ಆಗಲೇ ಕಾದಿರಿಸಿದೆ. ಮಿಕ್ಕವರು ಅಲ್ಲಿಗೆ ಹೋಗಿ ಅದೃಷ್ಟ ಪರೀಕ್ಷೆ ಮಾಡಿಕೊಳ್ಳಬಹುದು ಎಂದ.

ನಮ್ಮ ಗುಂಪಿನಲ್ಲಿ ಮಿಕ್ಕವರು, ನಾನೊಬ್ಬನೇ.

ಮೊದಲನ್ನಿಸಿತು. ತೆಪ್ಪಗೆ ಉಂಡು ಬೆಚ್ಚಗೆ ಹೋಟಲಲ್ಲಿ ಮಲಗೋಣ ಅಂತ. ಆಮೇಲೆ ಅನ್ನಿಸಿತು. ಹುಟ್ಟಿದಾಗಿನಿಂದ ಬಾಳಿನಲ್ಲಿ ಒಂದೊಂದು ಹಂತದಲ್ಲೂ ಅದೃಷ್ಟ ಪರೀಕ್ಷೇನೇ ನಾನು ಮಾಡ್ತಾ ಇರೋದು. ಹಾಗೂ ವಯಸ್ಸಾಗುತ್ತ ಬಂತು. ಲೀಡೋಗೆ ಹೋಗಿ ಅದೃಷ್ಟ ಪರೀಕ್ಷೆ ಮಾಡೋಣ. ಪ್ರವೇಶ ದೊರಕಿದರೆ ಚೆನ್ನ. ಸಿಗಲಿಲ್ಲ ಅಂದರೆ ಇನ್ನೂ ಚೆನ್ನ. ದುಡ್ಡು ಉಳಿಸಿಕೊಂಡು ಹಿಂತಿರುಗೋದು, ಬೆಚ್ಚಗೆ ಮಲಗೋದು, ಎಂದು ಯೋಚಿಸಿದೆ.

ರಾತ್ರಿ ಎಂಟಕ್ಕೆಲ್ಲಾ ಊಟದ ಶಾಸ್ತ್ರ ಮುಗಿಸಿ, ಸ್ಥಾನಗಳನ್ನು ಕಾದಿರಿಸಿದ ನಾಲ್ವರ ಜತೆಗೆ ನಾನೂ ಹೊರಡಲು ಸಿದ್ಧಮಾಡಿಕೊಂಡೆ. ಮೋಜಿನ ಉಡುಪನ್ನು ಹಾಕಿಕೊಂಡು ಮೆರೆಯುತಿದ್ದರು, ನನ್ನ ಸ್ನೇಹಿತರು. ಡ್ರೆಸ್ ಸೂಟ್ ಅಂತಾರಲ್ಲಾ, ಕರಿಷರಾಯಿ, ಹೊಳೆಯುವ ಬಿಳಿ ಅಂಗಿ, ಸ್ವಚ್ಛಾನೇ ಬಿಳಿ ಷರಟು, ಕರಿ ಬೊಟ್ಟೆ; ಉಡುಪು ಬಲು ಚೆಂದ ಕಾಣಿಸಿತು. ಮುಖಗಳನ್ನು ನೋಡದೆ ಇದ್ದರೆ ಡ್ರೆಸ್ಸು ಬಲು ಚೆನ್ನ. ಒಂದು ತರಹಾ ಬೇಜಾರು ನನಗೆ. ಇದೆಲ್ಲಾ ಶೃಂಗಾರ ಮಾಡಿಕೊಳ್ಳೋಕ್ಕೆ ಯಾರ ಕೈಲಿ ಆಗುತ್ತೆ ಅಂತ. ಕಾರಣ ನಮ್ಮ ಭಾರತದ 'ಕರಿ ಮುಚ್ಚಂಗಿಯನ್ನು ತೊಟ್ಟುಕೊಂಡಿದ್ದೆ. ಷರ್ಟು ಕಾಲರು ಬೋ ಇವುಗಳ ಗೋಳಿಲ್ಲವಲ್ಲಾ ಅಂತ. ಎಲ್ಲರೂ ಹೋಟಲಿನಿಂದ ನಡೆದು ಲೀಡೋಕ್ಕೆ ಹೊರಟೆವು, ರಾತ್ರಿ ಒಂಭತ್ತರ ಸಮಯ. ರಸ್ತೆಗಳೆಲ್ಲಾ ದೀಪಗಳಿಂದ ಝಗಿ ಝಗಿ ಹೊಳೆಯುತ್ತಿದ್ದುವು, ಹಾಡೇ ಹಗಲಿನಲ್ಲಿ ಇದ್ದಷ್ಟು ಬೆಳಕೇ ರಸ್ತೆಯಲ್ಲೆಲ್ಲಾ. ಆದರೆ ರಸ್ತೆ ಪಕ್ಕದಲ್ಲಿದ್ದ ಸಾಲು ಮರಗಳ ಕೆಳಗೆ ಅನುಕೂಲವಾಗಿ ಕತ್ತಲು ಕತ್ತಲು, ನಾವು ನಡೆದು ಹೋಗುತ್ತಿದ್ದಾಗ, ಆ ಮರಗಳಡಿಯ ಕತ್ತಲುಗಳಿಂದ ವಿಧವಿಧವಾದ ಶಬ್ದಗಳು ಕೇಳಿಬರುತ್ತಿತ್ತು. ಹಲ್ಲಿಗಳು ಲೊಚ ಲೊಚಗುಟ್ಟಿದ ಶಬ್ದ ಎಂತಹ ಬಾರಿ ಹಲ್ಲಿಗಳಿರಬೇಕು ? ಅಷ್ಟು ದೊಡ್ಡ ದನಿಯಲ್ಲಿ ಲೊಚಗುಟ್ಟುತ್ತಿವೆ ? ಪಕ್ಕದಲ್ಲಿದ್ದವರನ್ನು ಕೇಳಿದೆ, ಎಂತಹ ಹಲ್ಲಿಗಳಪ್ಪಾ ಅಂತ. ಅವರು ನಕ್ಕು ಹಲ್ಲಿಗಳಲ್ಲಾ ಕಣೋ, ಮನುಷ್ಯರು. ಮರದ ಕೆಳಗೆ ಕತ್ತಲಲ್ಲಿ ಚತುರ್ಭುಜರಿದ್ದಾರೆ. ಅವರು ಕಣೋ ಲೊಚ ಲೊಚ ಶಬ್ದ ಮಾಡುತ್ತಾರೆ ಎಂದರು. ಇನ್ನೂ ಎಂತೆಂತಹ ಸಪ್ಪಳಗಳೊ ಕೇಳಿಸುತ್ತಿತ್ತು, ಇವೆಲ್ಲಾ ಏನು ಎಂದು ವಿವರಣೆ ಕೇಳಿ ಸ್ನೇಹಿತರ ಕೈಲಿ ಅಪಹಾಸ್ಯಮಾಡಿಕೊಳ್ಳುವುದು ಬೇಡ ಎಂದು ತೆಪ್ಪಗೆ ಮುಂದೆ ನಡೆದೆ.

ಲೀಡೋವನ್ನು ತಲಪಿದೆವು. ಸ್ಥಳ ಕಾದಿರಿಸಿಕೊಂಡಿದ್ದವರು ಒಳಕ್ಕೆ ಹೋದರು. ತಬ್ಬಲಿ ತರಹ ನಾನು ಹೊರಾಂಗಣದಲ್ಲಿ ಬಿಕ ಬಿಕ ನೋಡುತ್ತ ನಿಂತಿದ್ದೆ. ನನ್ನ ಎದುರುಗಡೆ ವರಾಂಡಾ ತರಹಾ ಇತ್ತು. ಅಲ್ಲೊಬ್ಬ ಆಕಿ ಮೇಜಿನ ಮುಂದೆ ಕೂತಿದ್ದಳು. ೪೦–೪೫ರ ಪ್ರಾಯ ಇರಬಹುದು. ಈಕೀನ ಮಾತನಾಡಿಸಿದರೆ ನನ್ನ ಪತ್ನೀವ್ರತಕ್ಕೆ ಧಕ್ಕೆ ಬೀಳುವುದಿಲ್ಲ ಎಂಬ ಧೈರ್ಯದಿಂದ ಆಕೆಯ ಬಳಿಗೆ ಹೋಗಿ, "ಹೀಗೆ ನಾನು ಇಂಡಿಯಾದಿಂದ ಬಂದಿದ್ದೀನಿ. ಮೊದಲೇ ಸ್ಥಳ ಕಾದಿರಿಸಲಾಗಲಿಲ್ಲ, ಏನಾದರೂ ಅವಕಾಶ ಇದ್ದರೆ ಒಳಗೆ ಹೋಗಬೇಕು ಎಂದು ಆಸೆ ಎಂದೆ. ದುಂಡು ದುಂಡು ಮುಖದ ಆಕೆ, ನನ್ನನ್ನೊಮ್ಮೆ ಛಟ್ಟತಲೆಯಿಂದ ಪೂಗಳ ತನಕ ನೋಡಿದಳು. ಹತ್ತು ಫ್ರಾಂಕ್ ಕೊಡಿ ಎಂದಳು. ಕೊಟ್ಟೆ. ಇಲ್ಲೇ ಕೂತಿರಿ, ಅವಕಾಶ ಇದೆಯೇ ನೋಡ್ತೀನಿ ಎಂದು, ತಾನು ಕೂತಿದ್ದ ಕುರ್ಚಿಯಲ್ಲಿ ನನ್ನನ್ನು ಕೂರಿಸಿದಳು. ಅವಳು ಒಳಗೆ ಹೋದಳು. ಎರಡು ನಿಮಿಷ ಆಯಿತು, ಮೂರಾಯ್ತು, ಐದಾಯ್ತು. ಸುತ್ತಲೂ ಅಡ್ಡಾಡುತ್ತಿದ್ದ ಜನ, ಜನಿ, ಎಲ್ಲರೂ ನನ್ನನ್ನೇ ದುರುಗುಟ್ಟುತ್ತಾ ಬೆರಳು ತೋರಿಸಿ ಏನನ್ನೋ ಹೇಳುತ್ತಾ ಇದ್ದರು. ಕೆಲವರನಕ ಯಾರ್ಯಾರನ್ನೋ ಕರೆದು ಕೊಂಡು ಬಂದು ನನ್ನನ್ನು ತೋರಿಸುತ್ತಿದ್ದರು, ಏಕೆ ಹೀಗೆ, ನನ್ನ ಅಂಗಿ ಏನಾದರೂ ಸಾರು ಹುಳಿಗಳಿಂದ ಕೊಳಕಾಗಿದೆಯೇ, ಅಥವಾ ಷರಾಯಿ ಏನಾದರೂ ಹರಿದಿದೆಯೇ ? ಅಥವಾ ತಲೆ ಮೇಲೆ ಗುಬ್ಬಚ್ಚಿ ಕೂತಿದೆಯೇ ಎಂದು ಅನುಮಾನ ಬಂತು. ಹೋದರೆ ಹೋಗಲಿ ಹತ್ತು ಫ್ರಾಂಕ್. ಬೇಗ ತಲೆ ಮರೆಸಿಕೊಂಡು ಹೋಟಲಿಗೆ ಹಿಂತಿರುಗೋಣ ಎನ್ನಿಸಿತು. ಆದರೂ ಚಪಲ. ನೋಡೋಣ ಕಡೆ ತನಕ. ಅದೃಷ್ಟ ಹೇಗಿರುತ್ತೊ ! ಎಂದು ಇನ್ನೊಂದು ಕಡೆ ಮನಸ್ಸು ಎಳೆಯುತ್ತಿತ್ತು.

ಅಷ್ಟು ಹೊತ್ತಿಗೆ ಆಕಿ ಬಂದಳು. ಅವಳ ಜತೇಲಿ ಒಬ್ಬ ಮಾಣಿ ಬಂದಿದ್ದ. ಲೀಡೋದ ಮಾಣಿಗಳು, ಯೂರೋಪಿನ ಹೋಟಲುಗಳಲ್ಲೆಲ್ಲಾ ಅಚ್ಚುಕಟ್ಟಾದ ಉಡುಪು ಧರಿಸಿರುತ್ತಾರೆ. ಅಲ್ಲಿಗೆ ಬಂದ ಅತಿಥಿ ಅಭ್ಯಾಗತರು ಯಾರು, ಸೇವೆ ಮಾಡುವ ಮಾಣಿಗಳು ಯಾರ್ಯಾರು ಎಂದು ಹೇಳುವುದು ಸ್ವಲ್ಪ ಕಷ್ಟವೇ ? ಹುಚ್ಚಾಸ್ಪತ್ರೆಯ ತರಹ, ರೋಗಿಗಳ್ಯಾರು, ವೈದ್ಯರು ಯಾರು ಎಂದು ಸುಲಭವಾಗಿ ಪತ್ತೆ ಹಚ್ಚುವುದು ಎಷ್ಟು ಕಷ್ಟವೊ ಅಷ್ಟೇ ಕಷ್ಟ ಆಯಿತು ಲೀಡೊದಲ್ಲಿ ಕೂಡ.

ಆದರೂ ಈ ಮಾಣಿ "ನಮಸ್ತೆ" ಮಾಡುತ್ತ ಬಂದಿದ್ದನಾದ್ದರಿಂದ, ಮಾಣಿ ಅಂತ ತಿಳಿಯಿತು. ಅಂಗೈ ಅಂಗೈ ಹೊಸೆಯುತ್ತಿದ್ದ ರೀತಿ ನೋಡಿದರೆ ಇವನು ಅಂಗೈ ಹಿಂಗೈ ಸಂಪಾದನೆಯವನೇ ಇರಬೇಕು ಎಂದು ಖಂಡಿತವಾಯಿತು. ಬಂದವನೇ "ಹೀಗೆ ಬರಬೇಕು, ಮಹಾಸ್ವಾಮಿ, ದಯಮಾಡಿ" ಎಂದು ಬಲು ಮರ್ಯಾದೆ ಯಿಂದ ಮಾತಾಡಿದ. ಬಲು ಗೌರವದಿಂದ ರಂಗಮಂಟಪದ ಪಕ್ಕದ ಮೊದಲನೆ ಸಾಲಿನಲ್ಲೇ ನನಗೆ ಸ್ಥಳ ಮಾಡಿಕೊಟ್ಟು, "ಏನು ಒಪ್ಪಿಸಲಿ" ಎಂದು ವಿನಯದಿಂದ ಕೇಳಿದ.

ಸುತ್ತಲೂ ನೋಡಿದೆ. ಸಾಸಿವೆ ಕಾಳು ಹಾಕಿದರೆ ನೆಲಕ್ಕೆ ಬೀಳದೆ ಇರೋಹಾಗೆ ಜನ ದೊಡ್ಡಿ ಕೂಡಿದ್ದರು. ಸಿಗರೇಟಿನ ಹೊಗೆ ರೈಲು ಇಂಜಿನ್ನಿನ ಹೊಗೆ ತರಹ ದಟ್ಟವಾಗಿ ತೆರೆ ತೆರೆಯಾಗಿ ಸುರುಳಿ ಸುರುಳಿಯಾಗಿ ಏರೇರುತ್ತಿತ್ತು, ಸ್ಥಳ ಕಾದಿರಿಸಿದ್ದ ಸ್ನೇಹಿತರು ಎಲ್ಲಿ? ಈಗಲೇ ನೋಡಿಕೊಂಡಿದ್ದರೆ, ಹಿಂತಿರುಗುವಾಗ ಜತೆ ಸಿಕ್ಕಿದ ಹಾಗೆ ಆಗುತ್ತೆ. ಇಲ್ಲದೆ ಇದ್ದರೆ, ನಿಶಿರಾತ್ರೀಲಿ ಪ್ಯಾರಿಸ್ಸಿನಲ್ಲಿ ದಾರಿ ತಪ್ಪಿದರೆ? ಸ್ವಲ್ಪ ಹೊತ್ತು ನೋಡಿದ ಮೇಲೆ ರಂಗಮಂಟಪದ ಒಂದು ಫರ್ಲಾಂಗ್ ದೂರದಲ್ಲಿ ಹೊರಬಾಗಿಲಿನ ಹತ್ತಿರ ಒಂಟೆಗಳ ತರಹ ಕತ್ತುಗಳನ್ನು ಎತ್ತಿಕೊಂಡು ನೋಡುತ್ತ ಕುಳಿತಿದ್ದರು. ಅಷ್ಟು ದೂರದಲ್ಲಿ ಸಣ್ಣ ಬೊಂಬೆಗಳ ತರಹ ಕಾಣಿಸಿದರು. ತಟಕ್ಕನೆ ಹೊಳೆಯಿತು, ರಂಗಮಂಟಪದ ಮೇಲಿನ ವ್ಯಕ್ತಿಗಳು ಅವರಿಗೆ ಪುಟಾಣಿ ಬೊಂಬೆಗಳ ತರಹ ಕಾಣಿಸುತ್ತಿರಬೇಕು ಅಂತ.

ಮತ್ತೆ ಈ ಮಾಣಿ ಈ ರಂಗಮಂಟಪದ ಮೊದಲ ಸಾಲಿನಲ್ಲಿ ನನ್ನನ್ನು ಕೂರಿಸಿದ ಮರ್ಮ! ಇಷ್ಟಲ್ಲಾ ವಿನಯ! ಗೌರವ! ಓಹೋ ನನ್ನ ಮುಚ್ಚುಂಗಿ ಮುದಿ ಮುಖ ನೋಡಿ ಇವನೆಲ್ಲೋ ಭಾರತದ ಚಿಲ್ಲರೆ ರಾಜ ಇರಬೇಕು. ತುಂಬಾ ಹಣ ಇರಬೇಕು. ಅಸ್ವಾಭಾವಿಕ ಕೆಟ್ಟ ಕೆಟ್ಟ ಚಪಲ ಇರಬೇಕು. ಹೇರಳ ಹಿಂಡಬಹುದು ಅಂತ ಮಾಣಿ ಹೀಗೆ ಮಾಡಿರಬಹುದು ಎಂದು ಅನುಮಾನ ಬಂತು. ಅವನು ಏನು ತಪ್ಪು ತಿಳಿದುಕೊಂಡರೆ ನನಗೇನು. ರಂಗಮಂಟಪದ ರಂಗೋಲಿ ಪಕ್ಕದಲ್ಲೇ ಕುಳಿತಿದ್ದೆ. ಇದೊಂದು ಅದೃಷ್ಟ ಪರೀಕ್ಷೆಯಲ್ಲಿ ಸದ್ಯಕ್ಕಾದರೂ ನಾನು ಜಯಗಳಿಸಿದ್ದೆ ಮುಂದೆ ಏನಾಗುತ್ತೋ ಆಗಲಿ ಎಂದು, ರಾಜರ ಠೀವಿಯನ್ನು ಅಣಕಿಸುತ್ತಾ ಷ್ಯಾಂಪೇನ್ ಎಂದೆ. ಪಕ್ಕದಲ್ಲಿದ್ದವರಿಗೆ ಕೊಟ್ಟರೂ ಆಯಿತು ಎಂದುಕೊಂಡು, ಲೀಡೋ ಪ್ರವೇಶಕ್ಕೆ ಹಣವನ್ನು ಕೊಡಬೇಕಾಗಿಲ್ಲ. ಆದರೆ ಒಳಗೆ ಕೂತಾಗ ಏನಾದರೂ ಕುಡಿಯಲೇಬೇಕು, ಅಥವಾ ತಿನ್ನಲೇಬೇಕು ಎಂದು ಹೋಟಲಿನವರು ಹೇಳಿದ್ದು ಜ್ಞಾಪಕದಲ್ಲಿತ್ತು. ಮೊದಲು ಕೊಟ್ಟ ಹತ್ತು ಫ್ರಾಂಕ್ ಲಂಚದ ಲೆಕ್ಕಕ್ಕೆ ಸೇರಿದ್ದು ಎಂದೂ ಗೊತ್ತಿತ್ತು, ಆದುದರಿಂದಲೇ ಷ್ಯಾಂಪೇನ್ ಎಂದು ಸ್ವಲ್ಪ ಠೀವಿಯಿಂದಲೇ ಹೇಳಿದೆ. ಮಾಣಿ ಹೊರಟು ಹೋದ.

ನನ್ನ ಪಕ್ಕದಲ್ಲಿ ಅಮೇರಿಕಾದ ದಂಪತಿಗಳು ಕೂತಿದ್ದರು. ಅತನಿಗೆ ಸುಮಾರು ನನ್ನ ವಯಸ್ಸೇ! ಹೆಂಡತಿ ಜತೆಗೆ ಇಂತಹ ಕಡೆಗೆ ಯಾಕೆ ಬಂದ? ಅಥವಾ ಈಕೆ ಇವನ ಹೆಂಡತಿ ಅಲ್ಲವೇನೋ? ಎಲ್ಲವೂ ಈ ಲೋಕದಲ್ಲಿ ಈ ಕಾಲದಲ್ಲಿ ಟೆಂಪರವರಿ ಆಗಿರುವ ಹಾಗೆ ಆಕೇನೂ ಟೆಂಪರವರಿ ಹೆಂಡತಿಯೋ? ಹೀಗೆ ನನ್ನ ಆಲೋಚನೆಗಳು ಹೊಮ್ಮುತ್ತಿದ್ದಾಗ. ಆಕೆ ಗಂಡನನ್ನು ಕುರಿತು, "ತೂಕಡಿಸುಕ್ಕೆ ಇಲ್ಲಿಗೆ ಯಾಕೆ ಬಂದೆ ಜಿಂ" ಎಂದು ಕರ್ಕಶವಾಗಿ ಹೇಳಿದಳು. ಆತನಿಗೆ ಸ್ವಲ್ಪ ತೂಕಡಿಕೆ ಬಂದೂ ಇತ್ತು. ಇಷ್ಟು ಕಠೋರವಾಗಿ ಮಾತಿನಲ್ಲಿ ಗುದ್ದಬೇಕಾದರೆ, ಮದುವೆಯಾದ ಹೆಂಡತೀನೆ ಇರಬೇಕು ಎಂದು ನಿರ್ಧರಿಸಿದೆ.

ಈ ಹೊಗೇಲಿ ಉಸಿರಾಡುಕ್ಕೆ ಆಗುಲ್ಲ. ಹೊರಗೆ ಹೋಗುಕ್ಕೆ ಈ ಗಲಾಟೆಯಲ್ಲಿ ಅಸಾಧ್ಯ, ಎಲ್ಲಾದರೂ ಫೈರ್ ಎಸ್ಕೇಪ್ ಇದ್ದರೆ ಓಡಿಬಿಡ್ತಿದ್ದೆ" ಎಂದು ಆತ ನನಗೆ ಹೇಳಿದ. ನನ್ನ ಮನಸ್ಸಿನಲ್ಲಿರೋದನ್ನು ನೀವು ಹೇಳಿದಿರಿ ಎಂದು ನಾನೂ ದನಿಗೂಡಿಸಿ ಒಪ್ಪಿದೆ. ಮತ್ತೆ ಯಾಕೆ ಬಂದಿರಿ ಎಂದು ಕೇಳಿದ. ಹೆಂಡತಿ ಕಾಟಕ್ಕೆ ನಾನು ಬಂದೆ. ಒಂಟಿಯಾಗಿರೋ ನೀವು ಯಾಕೆ ಬಂದಿರಿ ಎಂದ ಆತ.

"ನೋಡಿ! ಮಾರಾಯ! ನಮ್ಮ ದೇಶದಲ್ಲಿ ಭರತನಾಟ್ಯ ಅಂತ ನಾಚು ಮಾಡ್ತಾರೆ. ಮುಖದಲ್ಲಿ ಮನಸ್ಸಿನ ಏನೆಲ್ಲಾ ಉದ್ವೇಗಗಳನ್ನು ಎಷ್ಟು ಚೆನ್ನಾಗಿ ತೋರಿಸುತ್ತಾರೆ? ನಾಚು ಅಂದರೆ ನನಗೆ ಬಲು ಪ್ರಿಯ. ರಷ್ಯಾಗೆ ಹೋಗಿದ್ದೆ. ಅಲ್ಲಿ "ಬಾಲೆ" ನಾಟ್ಯ ಆಡುತ್ತಾರೆ. ಮುಖಮುದ್ರೆಗಳು ಬಲು ಅಂದ. ಆದರೆ ನಮ್ಮ ದೇಶದವರ ತರಹ ಅಲ್ಲ. ಅಷ್ಟು ಸೊಬಗಿಲ್ಲ. ಅಷ್ಟು ಅರ್ಥವಿಲ್ಲ. ಪ್ಯಾರಿಸ್ಸಿನಲ್ಲಿ ನಾಟ್ಯ ಜಗತ್ಪ್ರಸಿದ್ಧ. ನೋಡೋಣ ಅಂತ ಬಂದಿದ್ದೇನೆ" ಎಂದು ವಿಷಯ ತಿಳಿಸಿದೆ. ನಾನು ಹೇಳಿದ್ದನ್ನು ಆತ ನಂಬಬಹುದು ಅಂತ ನನ್ನ ನಂಬಿಕೆ. ಈಚಲ ಮರದ ಕೆಳಗೆ ಮಜ್ಜಿಗೆ ಕುಡಿದೆ ಅಂತ ಹೇಳೋವಾಗ, ನಾವಾದರೂ ಅದನ್ನು ನಂಬಲೇಬೇಕು ಅಲ್ಲವೇ?

ಅಷ್ಟು ಹೊತ್ತಿಗೆ ರಂಗಮಂಟಪ ಸಿದ್ಧವಾಯಿತು. ಸೂತ್ರಧಾರ ಬಂದು ಎಲ್ಲರನ್ನೂ ಸ್ವಾಗತಿಸಿ, "ನೀವು ಹೀಗೇ ಇಲ್ಲಿಗೆ ರಾತ್ರಿ ಬಂದು ನಮ್ಮ ಆಟ ನೋಡಿ ಕೆರಳಿ ಸಂತೋಷಪಟ್ಟು, ತಲೆಬೋಳಿಸಿಕೊಂಡು ಹೋಗಿ, ಎನ್ನುವ ರೀತಿಯಲ್ಲಿ ನಗ್ತಾ ನಗ್ತಾ ಹೇಳಿದ.

ಠಿಣ್ ಣ್ ಣ್ ಅಂತ ಜಾಗಟೆ ತಿಳಿಯಾಗಿ ತೇಲುತ್ತ ಕೇಳಿಸಿತು. ತೆರೆ ಎತ್ತಿದರು. ಒಳಗಿನಿಂದ ನಾಟ್ಯರಾಣಿ ಜಿಗಿ ಜಿಗಿ ಕುಣಿಯುತ್ತಾ ಬಂದಳು. ಅವಳ ಮುಖವನ್ನೇ ದಿಟ್ಟಿಸಿ ನೋಡಿದೆ. ಅಂದವಾದ ಚೆಂದುಳ್ಳಿ ಮುಖ ಬೆಳದಿಂಗಳಿನಂತಹ ಹಾಲು ಕೆನ್ನೆಗಳು. ಗುಳಿ ಬೀಳುತ್ತಿದ್ದ ಕೆನ್ನೆಗಳು. ಗಲ್ಲದ ಮೇಲೂ ಗುಳಿ ಬಿದ್ದಿತ್ತು. ಮಾಟವಾದ ಮೂಗು. ಹೊಳೆಯುವ ಕಣ್ಣುಗಳು. ಹುಬ್ಬುಗಳನ್ನು ತಿದ್ದಿ ಮೀನಾಕ್ಷಿಯ ತರಹ ಕಾಣಿಸುವಂತೆ ಮಾಡಿದ್ದಳು. ಕೆಳ ರೆಪ್ಪೆಗೆ ಕಾಡಿಗೆ ಹಚ್ಚಿ ಕಣ್ಣಂಚಿನಿಂದ ತುಸು ದೂರ ಎಳೆದಿದ್ದಳು. ಬಿರಿದ ದಾಳಿಂಬಿ ತರಹ ಬಾಯಿ ರಂಗು ರಂಗೇರಿದ ತುಟಿಗಳು. ಎಳಕಿನ ಪ್ರಾಯದಿಂದ ಮುಖ ಸಾರಿಸಲ್ಪಟ್ಟಿತ್ತು. ಅವಳ ಮುಖಾನೇ ನೋಡ್ತಾ ಇದ್ದೆ. ಸುಮಾರು ಹತ್ತು ನಿಮಿಷ ಕುಣಿದಳು. ಅವಳ ಮುಖದ ಮೇಲೆ ಒಂದು ಹಾವ ಭಾವ ಸುಳಿದಾಡಿದ್ದನ್ನು ಕಾಣಲಿಲ್ಲ. ತುಟಿಗಳು ಸುಟ್ಟ ಇಟ್ಟಿಗೆಯ ತರಹ ಬಿಗಿದುಕೊಂಡೇ ಇದ್ದುವು. ಕಣ್ಣುಗಳು ಒಂದೇ ದಿಕ್ಕಿನಲ್ಲಿ ಹಚ್ಚಿದ ಊದುಕಡ್ಡಿಯ ತರಹ ಹೊಳೆಯುತ್ತಲೇ ಇದ್ದುವು. ಗಲ್ಲದ ಗುಳಿಗಳು, ಮೊದಲಿನಿಂದ

ಕೊನೆಯ ತನಕ ಒಂದೇ ಮಾಟ, ಒಂದೇ ಆಳ, ಒಂದೇ ಕಳೆ. ಮುಖ ಮನಸ್ಸಿನ ಪ್ರತಿಬಿಂಬ ಎಂದರೆ ಅವಳ ಮನಸ್ಸು ಖಾಲಿ ಇದ್ದಿರಬೇಕು. ಅವಳು ಸಮಾಧಿ ಸ್ಥಿತಿಯಲ್ಲಿದ್ದಿರಬೇಕು. ಅವಳು ನಿರ್ವಾಣವನ್ನು ಹೊಂದಿದ್ದಿರಬೇಕು.

ಅವಳ ಹಿಂದೆ ಹತ್ತಿಪ್ಪತ್ತು ನರ್ತಕಿಯರು ಪುಣು ಪುಣು ಅಂತ ಕುಣಿಯುತ್ತಾ ಬಂದರು. ಎಲ್ಲರ ಮುಖಗಳನ್ನೂ ರೆಪ್ಪೆ ಹಾರಿಸದೆ ದುರುಗುಟ್ಟಿಕೊಂಡೇ ನೋಡು ತ್ತಿದ್ದೆ. ಮಸಲಾ ಭಗವಂತ ಪ್ರತ್ಯಕ್ಷನಾದ ಅಂತ ಅನ್ನಿ. ಆಗ ಆವನ ದಿವ್ಯ ಮುಖವನ್ನೇ ನೋಡುತ್ತಾ ಆನಂದಿಸುತ್ತ ತನ್ನ ತನವನ್ನೇ ಭಕ್ತ ಮರೆತುಬಿಡುಲ್ಲವೇ, ಆತರಹ ನಾನು ನರ್ತಕಿಯರ ಮುಖವನ್ನೇ ದಿಟ್ಟಿಸಿ, ಏಕಾಗ್ರಚಿತ್ತದಿಂದ ನೋಡುತ್ತಿದ್ದೆ.

ಒಂದು ಮುಖದಲ್ಲಿ ಆಗಲಿ ಒಂದು ಹಾವ. ಒಂದು ಭಾವ. ಒಂದು ಚೈತನ್ಯ, ಒಂದು ಹೊಳಪು. ಒಂದು ಭಂಗಿ, ಕಾಣಿಸಬೇಕಲ್ಲ. ಬೇಲೂರಿನ ಶಿಲಾಬಾಲಿಕೆಯರ ಮುಖದಲ್ಲಿ ಒಂದೇ ನೋಟ ಕೆತ್ತಲ್ಪಟ್ಟಿದ್ದರೂ, ಅದು ಜೀವಂತವಾಗಿದೆ. ಆದರೆ ಈ ನರ್ತಕಿಯರ ಎಳೆ ಮುಖದಲ್ಲಿ ಬರೀ ಸ್ಮಶಾನದ ಕಳೆ. ಹಚ್ಚಿಕೊಂಡಿದ್ದ ಬೂದಿಯ ಭರಾಟೆ ನೋಡಿದ ಮೇಲೆ ಸುಡುವವರ ಸ್ಮಶಾನದ ಕಳೆ ಅಂತ ಹೇಳಬೇಕು.

ಇದೆಂತಹ ನರ್ತನ ? ನಮ್ಮ ದೇಶದ ನರ್ತನವೇ ಅರ್ಥ ಪೂರ್ಣವಾದುದು ಸುಸಂಸ್ಕೃತಿಯುದು ಎಂದನ್ನಿಸಿತು.

ನರ್ತನ ಮುಗಿಯಿತು. ಮುಂದಿನ ಕಾರ್ಯಕ್ರಮಕ್ಕೆ ರಂಗವನ್ನು ಸಿದ್ಧಮಾಡು ತ್ತಿದ್ದರು. "ಹೇಗಿತ್ತು" ಎಂದ, ಅಮೆರಿಕನ್ ನೆರೆಯುವ ; ಕಣ್ಣು ಕಣ್ ಬಿಡುತ್ತಾ.

ನನಗೆ ಅನ್ನಿಸಿದ್ದನ್ನು ವಿವರಿಸಿದೆ.

ಮಂಕು ಮುಂಡೇದೇ ಅನ್ನುವ ರೀತಿಯಲ್ಲಿ ನನ್ನನ್ನು ನೋಡುತ್ತಾ, ಮೂದಲಿ ಸುವ ದನಿಯಲ್ಲಿ "ಅಷ್ಟೆಲ್ಲಾ ಹುಡುಗಿಯರು, ತುಂಡು ದುಂಡಾಗಿ ಬಳುಕುತ್ತಾ ಬೆಳೆದ ಯುವತಿಯರು ಅಷ್ಟೆಲ್ಲಾ ಪ್ರದರ್ಶನ ಮಾಡಿದರು. ಯಾವುದೊಂದನ್ನೂ ಮುಚ್ಚು ಮರೆಯಿಲ್ಲದೆ ತೋರಿಸುತ್ತಾ ಕುಣಿದಾಡಿದರು. ಶೋಡಷ ಕಲೆಗಳನ್ನೂ ಮೆರೆಸಿದರು. ಒಬ್ಬರಲ್ಲ, ಇಬ್ಬರಲ್ಲ, ೨೦–೩೦ ಚೆಂದುಳ್ಳಿ ತರುಣಿಯರು. ಇಷ್ಟೆಲ್ಲಾ ಸುಗ್ಗಿ ಇದ್ದರೂ ಅವರುಗಳ ಮುಖಗಳನ್ನೇ ನೋಡುತ್ತಿದ್ದೆ ಅನ್ನುತ್ತೀಯಲ್ಲ" ಎಂದ.

ನಾಟ್ಯಶಾಸ್ತ್ರದ ಅಮಲಿನಲ್ಲಿ ನರ್ತಕಿಯನ್ನೇ ಮರೆತಿದ್ದೆ ; ಮದುವೆ ಸಂಭ್ರಮ ದಲ್ಲಿ ಮದುವಣಗಿತ್ತಿಯನ್ನೇ ಮರೆತ ಹಾಗೆ.

ಮುಂದೆ ಹುಷಾರಾಗಿರ್‍ತೀನಿ ಎಂದು ಅತನಿಗೆ ಮಾತು ಕೊಟ್ಟೆ.

ನಾವು ಕಂಡ ಕರ್ನಾಟಕ

ಆಗಾಗ ನನಗೊಮ್ಮೆ ಸಂಶಯ ಬಂದಂತಾಗುವುದು ; ಆಸಾಮಿ ಭಾಷೆಯನ್ನು ಮಾತನಾಡುವವರು ಆಸ್ಸಾಮದವರು, ಬಂಗಾಲಿಯನ್ನು ಮಾತನಾಡುವವರು ಬಂಗಾಲದವರು, ಮರಾಠಿಯನ್ನು ಮಾತನಾಡುವವರು ಮಹಾರಾಷ್ಟ್ರದವರು—ಇದೇನೋ ಸರಿ ; ಆದರೆ ಕನ್ನಡವನ್ನು ಮಾತನಾಡುವವರು ಎಲ್ಲಿಯವರು ? ಮೈಸೂರಿನವರು ಮಾತನಾಡುವ ಭಾಷೆಗೆ ಮೈಸೀ ಇಲ್ಲವೆ ಮೋಸೀ ಇಂತಹ ಯಾವುದಾದರೂ ಹೆಸರಿದೆಯೆ ? ತಿಳಿಯದಂತಾಗಿದೆ. ಇತಿಹಾಸವನ್ನು ನೋಡಿದರೂ ತಿಳಿಯದಂತಾಗಿದೆ, ಯಾಕೆಂದರೆ 'ಮೈಸೂರು' ಎಂಬುದು ಇತಿಹಾಸಕ್ಕಿಂತ ಭೂಗೋಲದಲ್ಲಿಯೆ ಕಂಡು ಬರುವುದು ಎನ್ನುತ್ತಾರೆ ಬಲ್ಲವರು.

ಇದೇ ಬಲ್ಲವರು ಇನ್ನೂ ಒಂದು ಮಾತನ್ನು ಹೇಳುತ್ತಾರೆ: .ಕನ್ನಡವನ್ನು ಮಾತನಾಡುವವರು ಕರ್ನಾಟಕದವರು ಎಂದು. ಆ ಮಾತಿನಲ್ಲಿಯೂ ನನಗೆ ವಿಶ್ವಾಸವಿಲ್ಲ ; ಯಾಕೆಂದರೆ, ಕರ್ನಾಟಕವೆಂಬುದು ಇತಿಹಾಸದಲ್ಲಿದೆಯಂತೆ, ಭೂಗೋಲದಲ್ಲಿರಲಿ ಬಿಡಲಿ ಅದು ಮಹತ್ವದ್ದಲ್ಲವಂತೆ. ಮಹಾಭಾರತದ ಕಾಲದಲ್ಲಿ ಕರ್ನಾಟಕವಿದ್ದಿತಂತೆ, ಅದು ಹೇಗೆ ಸತ್ಯ ? ಒಂದು ವೇಳೆ ಹೀಗೂ ಇರಬಹುದು. 'ತಿರುವನಂತಪುರ' ಎಂಬುದನ್ನು 'ತ್ರಿವಾಂದ್ರಂ' ಎಂದೂ, 'ವಿಶಾಖಪಟ್ಟಣ'ಕ್ಕೆ 'ವೈಜಾಗಪಟಾಂ' ಎಂದೂ 'ಮಲ್ಲೇಶಪುರ'ಕ್ಕೆ 'ಮಲ್ಲೇಶ್ವರಂ' ಎಂದೂ ಪರಕೀಯರು ಸರಿಯಾಗಿ ಉಚ್ಚಾರ ಬಾರದುದಕ್ಕೆ ಅಪಭ್ರಂಶ ಹೆಸರನ್ನಿಟ್ಟರಲ್ಲವೆ ? ಹಾಗೆಯೆ, ಮಹಾಭಾರತವನ್ನು ಬರೆದ ವ್ಯಾಸ–ವೈಶಂಪಾಯನ–ಸೌತಿ ಮೊದಲಾದವರಿಗೆ 'ಮೈಸೂರು' ಎಂಬುದು ಉಚ್ಚರಿಸಲು ಬಾರದೆ 'ಕರ್ನಾಟಕ' ಎಂದು ಹೆಸರನ್ನು ತಪ್ಪಾಗಿ ಉಚ್ಚರಿಸಬಾರದೇಕೆ ? ಯಾಕೆಂದರೆ, ಹೈದರ ಅಲಿ, ಟೀಪು ಸುಲ್ತಾನ ಮುಂತಾದ ಮಹಮದೀಯರಿಂದ ಗಳಿಸಿದ 'ಮೈಸೂರು' ಎಂಬ ಹೆಸರು—ಪಾಪ! ಈ ಮಡಿವಂತ ಋಷಿಗಳಿಗೆ ಉಚ್ಚರಿಸಲು ಹೇಗೆ ಬಂದೀತು ? ಆದುದರಿಂದ 'ಕರ್ನಾಟಕ' ಎಂಬ ಹೆಸರು ಸಂಶಯುತವಾದುದೆಂದೇ ಹೇಳಬೇಕಾಗುವುದು.

ಇದೇ ಮಾತನ್ನು ೧೨–೧೩ನೆಯ ಶತಮಾನದಲ್ಲಿ ಬರೆದ ಮರಾಠೀ ಜ್ಞಾನೇಶ್ವರಿ ಎಂಬ ಗ್ರಂಥದ ಬಗ್ಗೆಯೂ ಹೇಳಬಹುದು, ಇಲ್ಲಿಯೂ "ಕರ್ನಾಟಕ" "ಕಾನಡೀ" ಮುಂತಾಗಿ ।ಪದಗಳು ಬಂದಿವೆ. ಮೊದಲೇ ಮರಾಠಿ ಭಾಷಯವರಾದ ಜ್ಞಾನದೇವರು ಅದುವರೆಗೆ ರೂಢಿಯಲ್ಲಿದ್ದ ಕೆಲವು ಗ್ರಹಿತೆಗಳಿಂದ ಮೋಸ ಹೋಗಿರಲೂ ಸಾಕು. ೭ನೆಯ ಶತಮಾನದಲ್ಲಿ ಆಳಿದ ಬಾದಾಮಿಯ ಎರಡನೇ ಪುಲಕೇಶಿಯ ಕಾಲದ ಕೆಲವು ಶಿಲಾಶಾಸನಗಳಲ್ಲಿ "ಕರ್ನಾಟಕ–ಮಹಾರಾಷ್ಟ್ರ" ಎಂಬ ಪದಯೋಜನೆ ಇದೆ. "ಕರ್ನಾಟಕ ಎಂಬ ದೊಡ್ಡ ಮಹಾರಾಷ್ಟ್ರ" ಎಂದು ಸಾಮಾನ್ಯವಾಗಿ ತಪ್ಪು

ತಿಳಿದುಕೊಂಡಂತಿದೆ ಸಂಶೋಧಕರು. ಅಂದಿನ ಕಾಲದಲ್ಲಿ ಮರಾಠೀ ಮಹಾರಾಷ್ಟ್ರ, ಕರ್ನಾಟಕ ಮಹಾರಾಷ್ಟ್ರ ಎಂದು ಭೇದವಿದ್ದಿರಬೇಕು. ಅಂತೂ "ಕರ್ನಾಟಕ" ಎಂದರೆ ಮಹಾರಾಷ್ಟ್ರಕ್ಕೆ ಸಂಬಂಧಿಸಿದ್ದು, ಕನ್ನಡಕ್ಕೆ ಸಂಬಂಧಿಸಿದ್ದಲ್ಲ ಎಂಬುದು ಸ್ಪಷ್ಟವಿದೆ.

ನಿಜವಾಗಿ "ಕರ್ನಾಟಕ" ಎಂಬುದು ದೇಶವಾಚಕವಲ್ಲದೆ ವಿಶೇಷಣವಾಚಕವಾದ ಶಬ್ದವಿರಬೇಕು ಎನ್ನಿಸುವುದು. ಇಲ್ಲವಾದರೆ "ಕರ್ನಾಟಕ ರತ್ನ ಸಿಂಹಾಸನಾಧೀಶ್ವರ" ಎಂಬುದರ ಅರ್ಥವೇನು ? ಬಹಳ ಮಾಡಿ "ಕರ್ನಾಟಕ" ಎಂದರೆ ತಪ್ಪು ಇಲ್ಲವೆ ಅಂತಹ ಯಾವುದೆ ಬಣ್ಣ ಎಂಬ ಅರ್ಥದಲ್ಲಿರಬೇಕು ; ಹಾಗಿದ್ದಲ್ಲಿ, ಕಪ್ಪು (ಎರೆ) ಭೂಮಿಯ ಮಹಾರಾಷ್ಟ್ರ ಕಪ್ಪು ರತ್ನಗಳಿಂದ ಖಚಿತವಾದ ಸಿಂಹಾಸನ ಮುಂತಾಗಿ ನಾವು ಮೇಲಿನ ಪದಗಳಿಗೆ ಅರ್ಥವನ್ನು ಹಚ್ಚಬಹುದು. ಒಂದು ವೇಳೆ "ಕರ್ನಾಟಕ" ಎಂಬುದು ದೇಶವಾಚಕವಾಗಿದ್ದರೆ ಎಂತಹ ಅನರ್ಥ ! ಮೈಸೂರಿಗೆ ಸಿಂಹಾಸನವೇ ಇದ್ದಿರಲಿಲ್ಲ, ಇದ್ದುದು ಕರ್ನಾಟಕದ ಸಿಂಹಾಸನ ಎಂದು ವಿಪರೀತಾರ್ಥವನ್ನು ಮಾಡ ಬೇಕಾಗುತ್ತಿತ್ತು.

ಒಂದು ವಿಷಯದ ಬಗ್ಗೆ ಸಂಶೋಧನವಾಗುವುದಗತ್ಯವಾಗಿದೆ, "ಕರ್ನಾಟಕ" ಎಂಬ ಪ್ರದೇಶವೇ ಇಲ್ಲದಿದ್ದಾಗ ಸಾವಿರಾರು ವರ್ಷಗಳಿಂದ ಅದರ ಸಂಪ್ರದಾಯ ಹೇಗೆ ಬೆಳೆಯಿತು ? ಮಿಕ್ಕವರ ಮಾತಂತೂ ಇರಲಿ, "ಕರ್ನಾಟಕ" ಎಂಬ ಹೆಸರನ್ನು ಕೇಳಿದ ಮಾತ್ರಕ್ಕೆ ಸಿಡಿದೇಳುವ ಮೈಸೂರಿನ ಕೆಲ ಸಾರ್ವಜನಿಕ ಮುಂದಾಳುಗಳು ಕೂಡ ಮೋಸ ಹೋಗಿದ್ದರಲ್ಲ ? ಕನ್ನಡ ಭಾಷೆಗೂ "ಕರ್ನಾಟಕ" ಎಂಬ ಶಬ್ದಕೂ ಯಾವ ಸಂಬಂಧವೂ ಇಲ್ಲ ಎನ್ನುವಾಗ ಈ ಮುಂದಾಳುಗಳು ತಾವಾಗಿಯೇ ಕಟ್ಟಿದ ಸಂಸ್ಥೆಗೆ "ಕರ್ನಾಟಕ ಸಾಹಿತ್ಯ ಪರಿಷತ್ತು" ಎಂದು ಹೆಸರನ್ನಿಟ್ಟರಲ್ಲ ! ಪಾಪ ! ಆಸ್ಥಾನಕವಿಗಳ ಮಾತಂತೂ ಹೇಳುವಂತಲೆ ಇಲ್ಲ, ಶಾಕುಂತಲದ ಕನ್ನಡ ಅನುವಾದಕ್ಕೆ "ಕರ್ನಾಟಕ ಶಾಕುಂತಳ" ಎಂಬ ಹೆಸರನ್ನಿಟ್ಟರು ! ಜಾದುಗಾರನ ಮೋಸಗಾರಿಕೆಯ ಶಕ್ತಿ ಇದೆಯೇ ಈ "ಕರ್ನಾಟಕ" ಎಂಬ ಶಬ್ದದಲ್ಲಿ ?

'ಗತಾನುಗತಕೋ ಲೋಕಃ' ; ಒಬ್ಬನು ಮೋಸಹೋದರೆ ಇನ್ನೊಬ್ಬನು ಮೋಸ ಹೋಗುವುದು ಲೋಕದ ರೀತಿ. ಆ ಮೇರೆಗೆ ಸಾವಿರಾರು ವರ್ಷಗಳ ವರೆಗೆ ಯಾರೊ ವಂಚಕರು 'ಮೈಸೂರು' ಎಂಬ ದಿವ್ಯ ನಾಮವನ್ನು ಬಚ್ಚಿಟ್ಟು 'ಕರ್ನಾಟಕ' ಎಂಬ ಕ್ಷುಲ್ಲಕ ಹೆಸರನ್ನು ಪ್ರಚಾರದಲ್ಲಿ ತೆಗೆದಿದ್ದಾರೆ. ಜನ ಕೂಡ ಮೋಸಹೋಗಿದ್ದಾರೆ. ಬ್ರಿಟಿಷರು ಭಾರತದಲ್ಲಿ ತಮ್ಮ ರಾಜ್ಯವನ್ನು ಬೆಳೆಸುವಾಗ 'ಕರ್ನಾಟಕ ನವಾಬ'ನೊಡನೆ ಹೋರಾಡಿದರಂತೆ ! ಎಲ್ಲಿದ್ದಿತೊ ಕರ್ನಾಟಕ ? ಅದರಂತೆಯೆ ಪೇಶ್ವೆಯವರನ್ನು ಸೋಲಿಸಿದ ಮೇಲೆ 'ಸಾತಾರಾದಿಂದ ಬಳ್ಳಾರಿಯವರೆಗಿನ ಪ್ರದೇಶಕ್ಕೆ ಕರ್ನಾಟಕ ಎಂದು ಹೆಸರು, ಇಲ್ಲಿಯ ಭಾಷೆ ಕನ್ನಡ' ಎಂದು ಬ್ರಿಟಿಷ ಅಧಿಕಾರಿ ವರದಿ ಮಾಡಿ

ದ್ದಾನೆ. ಇದಂತೂ ಬರೀ ಮೋಸವಲ್ಲ. ದ್ರೋಹ! ಪಂಪನು ಪುಲಿಗೆರೆಯ ಕನ್ನಡವೆ ತಿರುಳ್ಗನ್ನಡ ಎಂದು ಹೇಳಿ ಮಾಡಿದ ಅಪರಾಧದಷ್ಟೆ ಘೋರವಾದ ಅಪರಾಧ ಇದು. ಅಲ್ಲವೆ ಮತ್ತೆ? ಕನ್ನಡದ ಪ್ರದೇಶವೆಂದರೆ ಮೈಸೂರು ಎಂದು ಮಾತ್ರ ಎಂದು ಅವ್ಯಾಹತವಾಗಿ ೧೫೦ ವರ್ಷಗಳ ಪರಂಪರೆ ಸಾರುತ್ತಿರುವಾಗ ೨೦೦೦ ವರ್ಷಗಳ ಮುದಿ ಪರಂಪರೆಯನ್ನು ನಂಬಿ ಕನ್ನಡ ಮಾತನಾಡುವ ದೇಶ 'ಕರ್ನಾಟಕ' ಎನ್ನಬಹುದೆ?

ಅಂತೂ ಈ ಮೋಸ ಮೊನ್ನೆ ಮೊನ್ನಿನವರೆಗೆ ನಡೆದುಬಂದು ಸತ್ಯಪ್ರಿಯರಾದ, ಅಹಿಂಸಾವ್ರತರಾದ ಮಹಾತ್ಮಾ ಗಾಂಧಿಯವರ ಕಣ್ಣಿಗೂ ಅಂಜನವನ್ನು ಹಚ್ಚೀತು! ದೇಶದ ಭಾಷಾನ್ವಯ ಆಡಳತ ವಿಭಜನೆಯ ಪೂರ್ವಸಿದ್ಧತೆ ಎಂದು ಮಹಾತ್ಮಾ ಗಾಂಧಿಯವರು ಕಾಂಗ್ರೆಸದಲ್ಲಿ 'ಕರ್ನಾಟಕ' ಎಂಬ ಪ್ರಾಂತವನ್ನು ರಚಿಸಿದರು! ಇಷ್ಟೆ ಅಲ್ಲ— ಮುಂದೆ ಕೆಲವು ವರ್ಷಗಳ ತರುವಾಯ ಮೈಸೂರು ತಾನೂ ಕಾಂಗ್ರೆಸದ ಒಂದು ಅಂಗವಾಯಿತು.

ಕೊನೆಗೆ 'ಕರ್ನಾಟಕ'ವು ಮೈಸೂರಿಗೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟಿತು— ಎಂಬ ಮಹಾ. ಮಹಾ ಮೋಸ!

ಆದರೆ ಸ್ವತಂತ್ರವಾದ ಭಾರತದಲ್ಲಿ ಈ ಮೋಸ ಬಯಲಿಗೆ ಬಿದ್ದಿತು. "ಕರ್ನಾಟಕ" ಎಂಬುದು ಒಂದು ಐತಿಹಾಸಿಕ ಕಲ್ಪನೆ ಎಂದೂ, ಅನಾದಿಕಾಲದಿಂದಲೂ ಕನ್ನಡಿಗರು ಮಹಿಷಾಸುರನ ವಂಶವೃಕ್ಷದಲ್ಲಿ ಬೆಳೆದವರೆಂದೂ, ಪೂರ್ವಕಾಲದಿಂದಲೂ ಆರ್ಯರ ದೇವತೆಗಳು ನಮ್ಮನ್ನು ವಂಚಿಸಿ ನಮ್ಮ ಮೂಲಪುರುಷನಾದ ಮಹಿಷಾಸುರನನ್ನು (ಇವನು-ಅಸುರ ಎಂಬ ದ್ವೇಷಕ್ಕಾಗಿ) ನಾವು ಮರೆಯುವಂತೆ ಪ್ರಚಾರ ಮಾಡಿದ್ದರೆಂದೂ, ಈಗ ಸ್ವತಂತ್ರರಾದ ನಾವು ನಮ್ಮ ಮೂಲ ವಂಶವನ್ನು ಅಭಿಮಾನದಿಂದ ಒಪ್ಪಿಕೊಳ್ಳಬೇಕೆಂದೂ ಕನ್ನಡಿಗರಿಗೆ ಜ್ಞಾನೋದಯವಾಯಿತು. ಇಷ್ಟೆ ಅಲ್ಲ ಇನ್ನು ಉಗ್ರ ಉಪಾಯಗಳನ್ನು ಕೈಕೊಳ್ಳದಿದ್ದರೆ ಈ ಮೋಸ ನಮ್ಮನ್ನು ಬಿಡದು ಎಂದೆನ್ನಿಸಿತು. ಆದಕ್ಕೆ ಒಂದೇ ಉಪಾಯ, ಉಗ್ರೋಪಾಯ; "ಕರ್ನಾಟಕ" ಎಂಬುದನ್ನೆ ಕಡಿದು ಹಾಕುವುದು!

ಸರಿ; ಸ್ವಾತಂತ್ರ್ಯ ಬಂದಾಕ್ಷಣ ಮೊದಲು "ಪ್ರಾಂತ ಕಾಂಗ್ರೆಸ್ ಕಮಿಟಿಯು "ಕರ್ನಾಟಕ"ವನ್ನು ಕೊಂದಿತು, ತರುವಾಯ ೧೯೫೬ರ ನವೆಂಬರ ೧ ರಂದು ಭಾಷಾನ್ವಯ ಪ್ರಾಂತರಚನೆಯ ಕಾಯಿದೆಯು ಕೊಂದೀತು "ಕರ್ನಾಟಕ" ಎಂಬುದನ್ನು; ಅನಿವಾರ್ಯವಾಯಿತು; ಎರಡರ ಬಾವೈಕ್ಯವಾಗಬೇಕಾದರೆ ಒಂದರ ಅಬಾವ ಅನಿವಾರ್ಯವಲ್ಲವೆ?

"ಕರ್ನಾಟಕ ನಮ್ಮದೆನ್ನುವಾಗ ಅದನ್ನು ನಾವೇ ಕೊಲ್ಲಬಹುದೆ"? ಎಂಬ ಸಂಶಯ ಬೇಡ,

ನಮ್ಮದು ತಾಯಿಯ ತಲೆ ಕಡಿದ "ಪರಶುಧರನು ಜನಿಸಿದ ನಾಡು."

—ಶ್ರೀರಂಗ

ಹಲೋ!! ಬಾಯೋ??

"ಧೈರ್ಯವಾಗಿ ಮಾತನಾಡಬೇಕ್ರೀ—'ಬಾಯಿದ್ದೋನು ಬರದಲ್ಲಿ ಬದುಕಿದನಂತೆ'— ಕೇಳಿದ್ದೀರೋ ಇಲ್ವೋ ಗಾದೇನ! ಕಾಲ ಯಾವತ್ತು ಇದ್ದ ಹಂಗೇ ಇದೆ. ಕೆಟ್ಟಿರೊದೂಂದ್ರೆ ಜನಾನೆ. ಕಾಲಕೆಟ್ಟುಹೋಯ್ತು ಅಂತ ಅನ್ನೊದ್ರಲ್ಲಿ ಏನಾದರೂ ಅರ್ಥವಿದೆಯೆ? ಅಂತರಿಕ್ಷದಲ್ಲಿ ಒಂದೇ ಕಡೆ ಸ್ಥಿರವಾಗಿ ನಿಂತಿದ್ದಾನೆ ಸೂರ್ಯ. ಅವನ ಸುತ್ತಾ ಭೂಮಿನೂ ಸೇರಿ ನವಗ್ರಹಗಳ ಜೊತೆ ಸುತ್ತುತಾ ಅದೆ. ಬೆಳಕಿನ ಸುತ್ತಾ ತಿರುಗೊ ಚಂಡಿನಂಥ ಭೂಮಿ, ಒಂದು ಮೈ ಒಂದು ಸಲ ಬೆಳಕಲ್ಲೂ, ಇನ್ನೊಂದು ಸಲ ಕತ್ಲಲ್ಲೂ. ಸುತ್ತಾ ಇರೋ ಸಮಯಾನ್ನ ಇಪ್ಪತ್ನಾಲು ಘಂಟೆ, ಮೂವತ್ತು ದಿನ, ಹನ್ನೆರಡು ತಿಂಗಳೂಂತ ಮಾಡಿಕೊಂಡು, ವರ್ಷ ವರ್ಷಗಳಿಂದ ಎಣಿಕೆ ಹಾಕುತ್ತಾ ಕಾಲ ಆಯ್ತು. ಒಳ್ಳೆಕಾಲ, ಕೆಟ್ಟ ಕಾಲ, ರಾಮರಾಜ್ಯ ಅಂತ ಮನುಷ್ಯ ಮಾಡಿಕೊಂಡ ಕಟ್ಟಲೆಗಳನ್ನ ಕಾಲದ ಮೇಲೆ ಹಾಕಿ. ಕೈ ಕೊಡವಿಕೊಳ್ಳೊ ಜನರನ್ನ ಕಂಡರೇ ನನಗೆ ಕೋಪ. ಕಾಲ ಕೆಡ್ತಂತೆ ಕಾಲ. ಏನ್ರೀ ಕಾಲಾಂದ್ರೇ"

—ಎಂದು ಪಿತ್ತನೆತ್ತಿಗೇರಿದವರಂತೆ ಎಗರಲಾಡಿದರು ಸೀತಾಪತಿನಾಯ್ಡುಗಳು. ಪಿಲ್ಲೂರಾಯ "ಕಾಲಕೆಟ್ಟು ಹೊಯ್ತು ಸೀತಾಪತಿಗಳೇ" ಅಂತ ಅಂದಿದ್ದೇ ತಪ್ಪೇ? ಎಡಗಾಲನ್ನು ಬಲಗಾಲಮೇಲೆ ಹಾಕಿಕೊಂಡು ಮುಂಗಾಲನ್ನು ಅಡಿಯಿಂದ ಆಡಿಸುತ್ತಾ ಕುಳಿತ ವೇಲ್ಲೂರಾಯ ಹಾಗೇ ಮುದುರಿ ಕುಳಿತ.

"ಅಲ್ಲ ಸೀತಾಪತಿಗಳೇ—ನೀವು ಹೇಳಿದ್ದು ಒಂದು ರೀತೀಲಿ ಸರಿಯೇನ್ನಿ...ಆದ್ರೂ ಲೋಕಾರೂಢಿಯಾಗಿ ಪ್ರಯೋಗದಲ್ಲಿರೋಮಾತು–ನಮ್ಮ ಕೋಲುತಾತನ ಕಾಲದಿಂದ ನಮ್ಮ ತಂದೆ ಕಾಲಕ್ಕೆ ಮತ್ತೆ ನಮ್ಮ ಕಾಲದಿಂದ– ನಮ್ಮ ಮಕ್ಕಳ ಕಾಲದವರೆಗೆ ಪರಿಸ್ಥಿತಿ ಹ್ಯಾಗೆ ಹ್ಯಾಗೆ ಬದಲಾಯಿಸ್ತಾ ಬಂದಿದೆನ್ನೊದಕ್ಕೆ ಹಾಗೆ ಅಂದೆ ಅಷ್ಟೆ."

"ಸರಿ ಹಾಗೆ ಒಪ್ಪಿಕೊಂಡಮೇಲೆ ನಾನು ಏನೂ ಹೇಳಲಾರೆ. ಈಗ ಯಾಕೆ ಬಂದ್ರಿ"

"ಸ್ವಾಮಿ ನಮ್ಮ ಶ್ರೀಮದ್ ಗಾಂಭೀರ್ಯ ಅಭಿವೃದ್ಧಿ ಕಾರಿಣಿ ಪರಸ್ಪರ ಸಹಾಯ ಪಂಢಿನವಿಷಯ ನಾನು ಹೇಳಲೇಬೇಕಾಗಿಲ್ಲ..."

"ಬ್ಯಾಡಿ ಪಿಲ್ಲೂರಾಯ್ರೋ ನೀವೇ ಬಾಯಿಬಿಟ್ಟಿ ಆದರ ವಿಚಾರ ಹೇಳಲೇ ಬ್ಯಾಡಿ ಲೋಕವೆ ಮಾತಾಡ್ಕೊತಾ ಇದೆ ಇನ್ನು ಬಾಯಿಬಿಟ್ಟು ಬೇರೇ ಏನೂ ಹೇಳಲೇ ಬೇಕಿಲ್ಲ..."

"ಹಿ ಹಿ ಹ್ಹಿ... ಅದು ಸರಿಯೆ...ಆದರೂ ವಿವೇಕಿಗಳೂ ಕಾಲಜ್ಞಾನ ತಿಳಿದವರೂ ಕಾಲಪರಿಸ್ಥಿತಿ ಅರಿತವರೂ ಆದ ತಾವು ಹೇಗೆ ಹೇಳಬಾರದು"

"ಮತ್ತೆನ್ಹ್ಯಾಗೆ ಹೇಳಬೇಕು?...ಜನಾ ಆಡ್ಕೊತಾ ಇರೋದು ಕೇಳಿಲ್ಲವೆ?"

"ಈಗಿನ ಕಾಲದಲ್ಲಿ ಒಬ್ಬನಿಗೆ ಎಲ್ಲರೂ. ಎಲ್ಲರಿಗಾಗಿ ಒಬ್ಬೊಬ್ಬ ಅನ್ನೋ ಸೂತ್ರಾದ ಮೇಲಿರೋ ಈ ಸಹಕಾರ ತತ್ವದ ಆಧಾರದಮೇಲೆ ನಿಂತಿರೋ ಈ ಶ್ರೀಮದ್ ಗಾಂಭೀರ್ಯ ಅಭಿವೃದ್ಧಿಕಾರಿಣಿ ಪರಸ್ಪರ ಸಹಾಯ ಸಂಘ ಲಿಮಿಟೆಡ್‌ನ ಒಂದು ಹಾದಿಗೆ ತಂದು ದೆಬ್ಬೆಕೊಟ್ಟು ನಿಲ್ಸಿ ಹತ್ತೂ ಜನಕ್ಕೆ ಅಕ್ಕಿ ಒದಗಿಸೋ ಧರ್ಮಕಾರ್ಯ ತಮ್ಮಿಂದ ಆಗಬೇಕಾಗಿದೆ..."

"ಅಯ್ಯೊಯ್ಯೋ ನಾನೇನಪ್ಪಾ ಮಾಡ್ಲಿ ಪಿಲ್ಲೂ ರಾವ್ ಎಲ್ಲಾ ತಪ್ಪನ್ನೂ ಕಾಲದಮೇಲೇ ಹಾಕಿರೋ ನಿಮಗೆ ಮನುಷ್ಯರಮೇಲೆ ನಂಬಿಕೇನೇ ಇಲ್ಲ..."

"ನಿಜ ತಮ್ಮ ಅಭಿಪ್ರಾಯ ಅರ್ಥವಾಯ್ತು...ನಿಜ...ನಾನೇ ಕೊಕ್ಕೆ ಹಾಕಿದ್ದು ನಿಮ್ಮ ಸ್ಪೆಶಲ್ ಲೋನ್ ಅರ್ಜಿ ಮೇಲೇ ಹಳೇಬಾಕಿ ಬಡ್ಡಿ ಪೂರ್ತಾ ಸಂದಾಯ ವಾಗಿಲ್ಲ ಕಾಲಪರಿಸ್ಥಿತಿ ನೆಟ್ಟಗಿಲ್ಲ ಇನ್ನೂ ಸಾಲ ಎಲ್ಲಿಂದ ತರೋದು ? ಅಂತ ನಾನೇ ನೋಟು ಹಾಕಿ ಅಧ್ಯಕ್ಷರಿಗೆ ಕಳಿಸಿಕೊಟ್ಟಿದ್ದೆ—ನಿಜ ಈ ವಿಷಯದಲ್ಲಿ ದಂಡಿನಲ್ಲಿ ಸೋದರಮಾವನೆ ?..."

"ಸರಿ ಮತ್ತೆ ಬಿಡಿ ಈಗ ಯಾಕೆ ಬಂದು ಕೈ ಕೈ ಹೊಸತೀರಿ ? "

"ಹಾಗಲ್ಲ ಸೀತಾ ಪತಿಗಳೇ...ಇದರಲ್ಲಿ ಯಾವ ಕಿತಾಪತಿನೂ ಇಲ್ಲ. ನನ್ನ ಸೊಸೈಟಿ ಈಗ ಮತ್ತೆ ತಲೆ ಎತ್ತಲೇ ಬೇಕಾಗಿದೆ ಈಗ ನೋಡೀ ಆಹಾರ ಪರಿಸ್ಥಿತಿ ಹೀಗೆ ಬರೋದಕ್ಕೆ ಕಾರಣವೇನು ?..."

"ಸಾವಿರ ಇರಬಹುದು ಅದನ್ನು ಕಟ್ಟಿಕೊಂಡು ನನಗೇನೂ".

"ನಿಮಗೇನೂಂದ್ರೆ ಆಗುತ್ತೆ ? ಈಗ ನೋಡಿ, ಆಹಾರ ಮಂತ್ರಿಗಳು ಗೋಡೌನ್‌ಗಳಲ್ಲಿ ಮೂರುತಿಂಗಳುಗಳ ಕಾಲ ಬೇಕಾಗೋ ಅಷ್ಟು ಅಕ್ಕಿ, ಗೋಧಿ ಇದೆ ಅಂತ ಅಂದ್ರು. ಮುಖ್ಯ ಮಂತ್ರಿಗಳಿಗಂತೂ ಆಹಾರದ ತೊಂದ್ರೆಯೇ ಇಲ್ಲ ಹಾಗಂತ ಹಗಲೂ ರಾತ್ರಿ ಹೇಳ್ತಾರೆ.

ಪೋಲೀಸ್ ಹಿರಿಯ ಅಧಿಕಾರಿಗಳು ಖಚಿತಪಡಿಸಿಕೊಂಡ್ರು, ಮಂಡಿಗಳಲ್ಲಿ ಬೇಕಾ ದಷ್ಟು ಮೂಟೆಗಳಿವೇಂತ. ಸರಿ ಒಪ್ಕೊಂಡೆವು, ನಾವು ಖಾಲಿಚೀಲ ಹಿಡ್ಕಂಡು ಅಂಗಡಿ ಅಂಗಡಿ ಅಲೆದವು. ಅಪ್ಪಗಳಿರಾ, ಅಣ್ಣಗಳಿರಾ. ನಮ್ಮ ಒಡಹುಟ್ಟಿದ್ಯಯ್ಯಗಳಿರಾ, ಸಾರ್ವಜನಿಕ ಸಂಸ್ಥೆ, ಶ್ರೀಮದ್ ಗಾಂಭೀರ್ಯ ಅಭಿವೃದ್ಧಿಕಾರಿಣಿ ಪರಸ್ಪರ ಸಹಾಯಕ ಸಂಘಕ್ಕೆ ಸಪ್ಲೆಮಾಡಿ" ಅಂತ ಮಂಡಿ ಮಂಡಿ ಅಲೆದೆವು. ಯಾರಾದ್ರೂ ಮಾತಾಡ ಬೇಕಿತ್ತಲ್ಲ...ಒಬ್ಬನೇ ಒಬ್ಬ ಉತ್ತರ ಕೊಟ್ಟ...

"ಹೌದ್ರೀ ಎಲ್ಲಾರೂ ಬೇಕಾದಷ್ಟು ಸ್ಟಾಕಿದೆ ಅಂತ ಹೇಳಿದಾರೆ ನಿಜ, ಸ್ಟಾಕು ಇರೋದು ನಿಮಗೆ ಕೊಡ್ಲಿಕ್ಕೇನು ? ಹಾಗಿದೇಂತ ಹೇಳಿದವರು ಬಂದು ಕೇಳಿದಾಗ ನಾವು ಅವರಿಗೇನು ಕೊಡೋಣ ? ಅವೆಲ್ಲಾ ಅವರ ಸ್ಟಾಕು. ನಿಮಗೂ ಅದಕ್ಕೂ ಸಂಬಂಧ ಇಲ್ಲ" ಅಂತ ಉತ್ತರ ಕೊಟ್ಟ. ಅಲ್ಲ ಸೆಂಟ್ರಲ್ ಹೋಲ್ ಸೇಲ್, ಪರಸ್ಪರ ಸಹಾಯಕ ಸಂಘಕ್ಕೆ ಮುತ್ತಿಗೆ ಹಾಕಿದೆವು. ಅವರೆಂದರು, ಲಾರಿ

ಆವಡಿಗೆ ಹೋಗೇದೆ. ಅರವತ್ತು ಸಾವಿರ ಕುಚಗಲಕ್ಕಿ ಮೂಟೆ ಇದೆ, ಕೇರಳಕ್ಕೆ ಕಳಿಸಬೇಕೂಂದ್ರು. ಅಲ್ರೀ ನಮ್ಮ ಸೊಸೈಟಿ ಸುತ್ತಾ ಮುತ್ತಾ ಇರೋ ಮನೆಗಳವರ ಗತಿ ಏನೂ—ಅಂಗಡಿ ಅವರು ನೂರೈವತ್ತು ಪೈಸಾ ಮುಕ್ಕಾಲು ಕೇಜೀ ಕಳ್ಕೊಳ್ಕಲು. ಮಗ್ಗುಲಕ್ಕಲು, ನುಚ್ಚಕ್ಕಿಲು ಅಂದಾರೇ. ಮೊದಲೇ ಜನ ಕಂಗೆಟ್ಟಿದೆ, ಲೂಟಿ ಮಾಡ್ಯಾರು, ನಾವು ಹತ್ತು ಜನಕ್ಕೆ ಅನುಕೂಲ ಆಗಲೀಂತ ಈ ಸೊಸೈಟಿ ತೆಗೆದೇವಿ ಕೊಡ್ರುಪ ಅಂತ ಅಂದೆವು. ಆವರು ಏನೂ ಮಾತಾಡ್ಲಿಲ್ಲ. "ಬಾಗಿಲ ಹಾಕಬೇಕು, ಸರೀರಿ" ಅಂತ ಬೀಗದಕ್ಕೆ ಕೈಗೆ ತೆಗೆದುಕೊಂಡರು ಆಮೇಲೇ..."

"ಸಾಕು ಸಾಕು ನನಗೆ ತಲೆನೋವು ಬಂತು ಪಿಲ್ಲೂರಾವ್ ಸಧ್ಯ ಈಗ ನನ್ನಿಂದ ಏನು ಆಗಬೇಕಾಗಿದೆ ಹೇಳು..." ಎಂದು ಬೇಸರದಿಂದ ತಲೆಮೇಲೆ ಕೈ ಇಟ್ಟರು ಸೀತಾಪತಿಗಳು. ಪ್ರಾರಂಭದಲ್ಲಿ ಧೈರ್ಯವಾಗಿ ಮಾತಾಡಬೇಕ್ರೀ ಅಂತ ಕಾಲಸ್ಥಿತಿ ಮೇಲೆ ಬಾಷಣಾಮಾಡಿದ ಸೀತಾಪತಿಗಳ ತಲೆ ತಿನ್ನುತ್ತಿದ್ದರು ಪಿಲ್ಲೂರಾವ್ ಎದುರುಗಿನ ಮೇಜಿನಮೇಲಿದ್ದ ಪೋನು ಗಣ ಗಣ ಅಂದಿತು, ಸೀತಾಪತಿಗಳು ಅದನ್ನೆತ್ತಿ ಕಿವಿ ಬಾಯಿ ಗಳಿಗಿಕ್ಕಿಕೊಂಡ.

"ಹಲ್ಲೋ"...ಎಂದು ಬಾಯಿಬಿಟ್ಟರು

"......"

"ಇಲ್ಲ...ಸ್ಟಾಕಿಲ್ಲ...ಪಚೋಡಿ...ಕಿಚೋಡಿ ಅಂತ ಯಾಕೆ ಪೇಚಾಡ್ತೀರಾ ..ಇಲ್ಲ ಲಾರಿ ಹೊಯ್ತು"

"..."

" ಮುಖ್ಯ ಮಂತ್ರಿಗಳಿಗೆ ಪೋನು ಮಾಡಿ "

" ... "

" ನಾನೇನು ಮಾಡ್ಲೆಪ್ಪಾ...ಡೆಲ್ಲಿಗೆ ಪೋನು ಮಾಡ್ರೀ...ಕಬ್ಬಿಣದ ವ್ಯಾಪಾರ ಸರ್ಕಾರ ಸಿಮೆಂಟು ಸಕ್ಕರೆ ಗೊಬ್ಬರ ಅವರ್ದೇ ನಮ್ಮ ಕೈಯ್ಯಾಗಿದ್ದದ್ದು ದವಸಧಾನ್ಯ ಯಾಪಾರ ಅದಕ್ಕೆ ಅವರೇ ಕಾರ್ಪರೇರ್ಷ...ಸರಿಮಾಡ್ಲಿ ಜನರ ಜರೂರಾ ಏನದೆ ?... ಕುರುಳು ಕಂಟ್ರಾಕ್ಟಮಾಡ್ಲಿಬಿಡಿ..."

" ... "

" ಹಲ್ಲೋ...ಈಗ ನೋಡಿ ಏನೂ ಮಾತಾಡಿ ಪ್ರಯೋಜನ ಇಲ್ಲ...ನಮ್ಮ ಲೆಕ್ಕಾ ನೋಡ್ರಿ ಸ್ಟಾಕ್‌ನೋಡ್ರಿ ನಾನೇನು ಮಾಡ್ಲಿ...ಇಲ್ಲ..."

ಠಕ್ ಎಂದು ಪೋನು ಕುಕ್ಕಿ ಕಿವಿ ಸರಿಮಾಡಿಕೊಂಡರು ಸೀತಾಪತಿಗಳು. ಪಿಲ್ಲೋ ರಾಯನ ಬೇಳೆ ಬೆಂದಿರಲಿಲ್ಲ. ಇವನ ಬಳಿ ಬೇಕಾದಷ್ಟಿದೆ ಹೊರಗೆ ತೆಗೆದರೆ ನಾಳೆ ಒಂದೊಂದು ಕೇಜಿನ ಎರಡೆರಡು ರೂಪಾಯಿ ನಫೆಗೆ ಮಾರೋದು ಹೋಗುತ್ತಲ್ಲಾನ್ನೊ ಸಂಕಟ. ಸ್ಟಾಕ್‌ಮಾಡಿ ಹೆಚ್ಚಿಗೆಗೆ ಮಾರೋದು ವ್ಯಾಪಾರದ ವ್ಯಾಪಾರಧರ್ಮಾ...

ಅದನ್ನು ಕೊಳ್ಳೋದು ನಮ್ಮ ಕರ್ಮಾ. ಊರೆಲ್ಲಾ ಉದ್ಧಾರಮಾಡೋ ಧರ್ಮ ಬುದ್ಧಿಯ ಪಿಲ್ಲೂರಾಯನು ಸೀತಾಪತಿಗಳ ಹತ್ತಿರ ಅಕ್ಕಿ ತಂದೆ ತರುವುದಾಗಿ ಇತರೆ ಡೈರೆಕ್ಟರುಗಳ ಬಳಿ ಮೀಸೆ ತಿರುವಿ ಬಂದಿದ್ದರು.

ಹಿಂದೊಮ್ಮೆ ನೆಲ್ಲೂರಿಗೆ ಅರ್ಜೆಂಟಾಗಿ ಹಣ ಕಳಿಸಬೇಕಾದ ಸಮಯದಲ್ಲಿ ಪಿಲ್ಲೂರಾಯನ ಸೊಸೈಟಿಗೆ ಸಾಲಕ್ಕೆ ಹಾಕಿದ್ದರು. ಸೀತಾಪತಿಗೆ ರೂಲಿಸ್ ಪ್ರಕಾರ ಪಿಲ್ಲೂರಾಯ 'ಇಲ್ಲ' ಅಂದಿದ್ದ. ಅದಕ್ಕ ಕೋಪ ಈ ರೀತಿಯಲ್ಲಿ ಇಡೀ ಸೊಸೈಟಿ ಮೇಲೇ ತಿರುಗಿಬಿದ್ದು ಸೇಡು ತೀರಿಸಿಕೊಳ್ಳುವ ರೀತಿಯಲ್ಲಿ ತಿರುಗಿತ್ತು,

"ಏನಂತಿರಿ ಸೀತಾಪತಿಗಳೇ, ಇದು ರಾಮರಾಜ್ಯ ಆಗಬೇಕಾಗಿದೆ. ೧೯೪೨ರಲ್ಲಿ ಜವಾಬ್ದಾರಿ ಸರ್ಕಾರ ಬರಬೇಕಾಗಿದ್ದ ಕಾಲದಲ್ಲಿ 'ಜೋಳಿಗೆ ಹಿಡಿದು ಅಕ್ಕಿ ತಂದು ಜನಕ್ಕೆ ಒದಗಿಸೋದು ನಮ್ಮ ಕರ್ತವ್ಯ' ಅಂತ ಗಾಂಧಿ ಮೈದಾನದಲ್ಲಿ ಬಾಷಣಮಾಡಿ ಜೈಕಾರ ಮಾಡಿಸಿಕೊಂಡ್ರಲ್ಲಾ, ಆ ಮಾತು ಎಲ್ಲಿ ಹೋಯ್ತು ಈಗ."

"ಆಡಿದವರ ಮಾತು ಕೇಳಿ, ನಾನು ಆಗೂ ಇದೇ ವ್ಯಾಪಾರ ಮಾಡ್ತಿದ್ದೆ, ಈಗೂ ಅದೇ ವಾಪಾರ ಮಾಡ್ತಿದೀನಿ" ಮತ್ತೆ ಫೋನು ಗಣ ಗಣ ಅಂತು.

"ಹಲ್ಲೋ ೯ – ಆ. ಯಾರೂ – ಓ ಕಾಂಗ್ರೆಸ್ ಆಫೀಸೇ! ಹುಂ. ಕಳಿಸ್ತೀನಿ ಆಟೋ ಯಾವುದಾರ ನೋಡಿ ಆಳಿನ ಕೂಡ ಕಳಿಸ್ತಿನಿ. ಹುಂ. ಹ ಹ್ಹ ಹ ಹ್ಹ... ಇಲ್ಲ. ಹುಂ ಬಂದಿದ್ರು...ಕೊಟ್ಟೆ, ಇಲ್ಲ ಕಳಿಸಿ. ಸಾವಿರ ಮೂಟೆ ಸಕ್ರೆ??— ಉಹುಂ—ಬ್ಯಾಡ. ಅದೇ ಗೋಡೌನಾಗೇ ಇರ್ಲಿ ಹುಂ—" ಎಂದು ಏನೇನೋ ಮಾತಾಡಿದರು.

"ಕಾಲಕೆಡ್ತು ಸೀತಾಪತಿಗಳೆ"

"ಸೈ ಮತ್ತೆ ಅದೇ ಮಾತಾಡ್ರಿ...ಹೋಗ್ರೀ ನಿಮಗೆ ಬೇರೆ ಕೆಲಸ ಇಲ್ಲ ಈ ಶ್ರೀಮಂದ್ ಗಾಂಭೀರ್ಯ ಅಭಿವೃದ್ಧಿಕಾರಿಣಿ ಸಂಘಕ್ಕೆ ಪ್ರಾಣ ಒಪ್ಪಿಸ್ತಿದ್ದೀರಿ,..ಕಾಲ ಕೆಟ್ಟಿಲ್ಲ .. ಮನುಷ್ಯರೇ ಕೆಟ್ಟಿರೋದು ಧೈರ್ಯವಾಗಿ ಮಾತಾಡಬೇಕ್ರೀ... ಬಾಯಿದ್ದೋನೂ..." ಎಂದು ಸೀತಾಪತಿಗಳು ರಾಗ ಎಳೆದಾಗ,

"ಬರದಲ್ಲಿ ಬದುಕಿದ್ನಂತೆ...ಬದುಕಿ ನಾವು ಸಾಯ್ತೀವೀ...ನೀವೇ ಬದುಕಿ..."

ಎಂದು ಭಿರಿಭಿರಿ ಬರಿಗೈಲೇ ಆ ಮಂಡಿ ಇಂದಲೂ ಹೊರಬಂದರು. ತಾವೇ ಕಟ್ಟಿದ ಸೊಸೈಟಿ ಕಟ್ಟಡಕ್ಕೆ ಬಂದರು. ಸಾಲುಸಾಲಾಗಿ ಹೆಂಗಸರು ಮಕ್ಕಳು ಮುದುಕರು ಹುಡುಗರು ಹರೆಯದವರು ಬಿಸಿಲಲ್ಲಿ ನಾಲ್ಕು ತಾಸು ಕ್ಯೂ ನಿಂತಿದ್ದರು. ಕಂಗಾಲಾಗಿದ್ದ ಆ ಜನರನ್ನು ನೋಡಿ ಏನೂ ತೋಚದೆ ಜೈ ಬಾರತ್ ಜೈ ಕರ್‌ನಾಟಕ್ ಅಂತ ಅಂದರು.

—ದಾಶರಥಿ ದೀಕ್ಷಿತ್.

ಕೊರವಂಜಿ

ಕೆಂಪೇಗೌಡ ಸರ್ಕಲ್, ಬೆಂಗಳೂರು–೯

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ

ತಿಳಿ ಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು, ಇವುಗಳಿಗೆ ಸರ್ವದಾ ಸುಸ್ವಾಗತವುಂಟು, ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ಮಿಕ್ಕ ವಿಚಾರ ಗಳನ್ನು ವ್ಯವಸ್ಥಾಪಕರಲ್ಲೂ ಪ್ರಸ್ತಾಪಿಸಬೇಕು.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩–೦೦

ಬಿಡಿ ಪ್ರತಿ ಕೇವಲ ೨೫ ಪೈಸೆ.

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೇ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು. ಹಾಗೆ ಬದಲಾವಣೆಯಾದ ವಿಳಾಸವನ್ನು ತಿಳಿಸುವಾಗ ತಮ್ಮ ಚಂದಾ ಸಂಖ್ಯೆಯನ್ನೂ ತಿಳಿಸಬೇಕಾಗಿ ವಿನಂತಿ.

NEWS AGENTS

1. JAI HIND TRADING CORPORATION
   Park View, KOLAR
2. Shri GOPAL DOSS
   104, M. G. Road, POONA-1
3. M/s BHARATH STORES
   4/69, W. E. A. Krishna Market
   Karolbagh, NEW DELHI-5

Reg. No. B.G. 343 KORAVANJI November 1964

Printed by B. S. Iyengar, Bangalore-2

Publisher—B. N. Gupta Editor—M. Shivaram